6. ವಿತ್ತೀಯ ಕಾರ್ಯಕಲಾಪಗಳು

2014–15ನೇ ಸಾಲಿನ ಅನುದಾನ ಬೇಡಿಕೆಗಳ ಬೇಡಿಕೆ ಸಂಖ್ಯೆ – 7 ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಮೇಲಿನ ಮುಂದುವರಿದ ಚರ್ಚೆ.

ಉಪಾಧ್ಯಕ್ಷರು:– ಮಾನ್ಯ ಬಸವರಾಜ ಬೊಮ್ಮಾಯಿಯವರೆ, ತಾವು ಮಾತನಾಡುವುದನ್ನು ಮುಂದುವರೆಸಿ. ಹತ್ತು ನಿಮಿಷದಲ್ಲಿ ಮಾತನಾಡಿ ಮುಗಿಸಿ.

ಶ್ರೀ ಬಸವರಾಜ ಬೊಮ್ಮಾಯಿ (ಶಿಗ್ಗಾಂವ್):– ಮಾನ್ಯ ಉಪಾಧ್ಯಕ್ಷರೆ, ನಾನು ಈಗಾಗಲೇ ಹೇಳಿದಂತೆ ಒಂದು Devolution of powers ನಲ್ಲಿ ಸ್ಪಷ್ಟತೆ ಇರಬೇಕು. ಯಾವ ರೀತಿ ಕೇಂದ್ರ ಮತ್ತು ರಾಜ್ಯದ ನಡುವೆ State list, Central list ಇದೆ, ಅದೇ ರೀತಿ ಪಂಚಾಯಿತಿ ಮತ್ತು ರಾಜ್ಯದ ನಡುವೆ ಬಹಳ ಸ್ಪಷ್ಟವಾದಂತಹ ವಿಷಯಗಳ ಬಗ್ಗೆ ಸ್ಪಷ್ಟತೆ ಇರಬೇಕು ಮತ್ತು ವಿಷಯ ಕಾರ್ಯವ್ಯಾಪ್ತಿ ಬಗ್ಗೆಯೂ ಸ್ಪಷ್ಟತೆ ಇರಬೇಕು. ಉದಾಹರಣೆಗೆ 29 ಇಲಾಖೆಗೆ ನಾವು ಮಾಡಿದ್ದೇವೆ ಎಂದು ಹೇಳುತ್ತೀರಿ. ಆದರೆ ಎಷ್ಟರಮಟ್ಟಿಗೆ ಆ ಇಲಾಖೆಯಲ್ಲಿ ಅಧಿಕಾರ ವಿಕೇಂದ್ರೀಕರಣ ಆಗಿದೆ. ಯಾವ್ಯಾವ ಹಂತದ ಅಧಿಕಾರ ಅಲ್ಲಿದೆ ಮತ್ತು ಯಾವ್ಯಾವ ಹಂತದಲ್ಲಿ ಆ ಅಧಿಕಾರದಿಂದ ಪರಿಹಾರ ಮತ್ತು ಅಭಿವೃದ್ಧಿ ಮಾಡಲಿಕ್ಕೆ ಸಾಧ್ಯ ಎನ್ನುವುದನ್ನು ಈಗಾಗಲೇ ಬಹಳಷ್ಟು ರಿಪೋರ್ಟ್‌ಗಳಲ್ಲಿ well defined ಇದೆ. ಅದನ್ನು ತಾವು ಇನ್ನೊಂದು ಬಾರಿ ಸ್ಪಷ್ಟತೆಯಿಂದ revisit ಮಾಡಿ. ಅದನ್ನು ತಾವು Act ನಲ್ಲಿ ತೆಗೆದುಕೊಂಡು ಬಂದು ಯಾವುದೇ ರೀತಿಯ circular ಮುಖಾಂತರ ಅದನ್ನು tinker ಮಾಡುವುದಾಗಲಿ, dilute ಮಾಡುವುದಾಗಲಿ ಅವಕಾಶವನ್ನು ಮಾಡಕೂಡದು ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇನ್ನೊಂದು ಯಾವುದೇ ಕಾರಣಕ್ಕೂ ಇಲ್ಲಿ ಕುಳಿತ ನಮ್ಮ ಜವಾಬ್ದಾರಿ ಏನಿದೆ ಅಂದರೆ, ಈ Institutionಗಳ ಮಧ್ಯೆ ಅಂದರೆ ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ, ಜಿಲ್ಲಾ ಪಂಚಾಯಿತಿ, ರಾಜ್ಯ ಸರ್ಕಾರ ಮತ್ತು ಕೇಂದ್ರ

ಸರ್ಕಾರಕ್ಕೂ ಅನ್ವಯಿಸುತ್ತದೆ. ಈ Institutionಗಳ ಮಧ್ಯೆ ಎಂದೂ ಸಂಘರ್ಷ ಆಗದೇ ನೋಡಿಕೊಳ್ಳುವುದು ನಮ್ಮ ಆಡಳಿತದ ಜವಾಬ್ದಾರಿ. ಇದು ಪದೇ ಪದೇ ಆಗುತ್ತಿದೆ. ಯಾವುದೇ ರೀತಿಯ Institutional ಸಂಘರ್ಷ ಏನಿದೆ ಇದು ನಮ್ಮ ಕೆಟ್ಟ ಆಡಳಿತದ ಪ್ರತಿಬಿಂಬ ಎಂದು ನಾನು ಭಾವಿಸುತ್ತೇನೆ. ನಮ್ಮಲ್ಲಿ ಒಂದು ಸ್ಪಷ್ಟತೆ ಇಲ್ಲ. ನಮ್ಮಲ್ಲಿ gray area ಇದೆ. ನಮ್ಮಲ್ಲಿ ಯಾವುದೇ ರೀತಿಯ ಅಧಿಕಾರ ವಿಕೇಂದ್ರೀಕರಣ ಬದ್ಧತೆಯಲ್ಲಿ ಎಲ್ಲೋ ನಾವು ಲೋಪ ಮಾಡಿದ್ದೇವೆ ಎಂದು ಬಹಳ ಸ್ಪಷ್ಟವಾಗಿ ಕಾಣುತ್ತದೆ. ಈ Institutionಗಳ ಮಧ್ಯೆ ಸಂಘರ್ಷವನ್ನು ತಪ್ಪಿಸುವುದು ಬಹಳ ಪ್ರಮುಖವಾದ ಕರ್ತವ್ಯವೆಂದು ನಾನು ಭಾವಿಸುತ್ತೇನೆ. ಈಗ ಕಳೆದ ಹಲವಾರು ವರ್ಷದ ನಮ್ಮ ಅನುಭವದಿಂದ, ಯಾವ್ಯಾವ ಏರಿಯಾದಲ್ಲಿ, ಯಾವ್ಯಾವ ವಿಷಯದಲ್ಲಿ, ಯಾವ್ಯಾವ ಸಂದರ್ಭದಲ್ಲಿ ಅಲ್ಲಿ ಸಂಘರ್ಷವಾಗುತ್ತಿದೆ ಎನ್ನುವುದು ಗೊತ್ತಿದೆ. Area of conflict ಗೊತ್ತಿದೆ. ಆದ್ದರಿಂದ ಅವುಗಳನ್ನು ನಿವಾರಣೆ ಮಾಡಲಿಕ್ಕೆ ತಾವು ಕ್ರಮವನ್ನು ತೆಗೆದುಕೊಳ್ಳಬೇಕು. ಅಧಿಕಾರಿ ಮಟ್ಟದಲ್ಲಿ ತಾವೇನಾದರೂ ಕೇಳಿದರೆ ಅವರು ತಮ್ಮದೇ ಆದಂತಹ ವಿವರಣೆಯನ್ನು ಕೊಡುತ್ತಾರೆ. ಯಾವುದೂ ಸಂಘರ್ಷ ಇಲ್ಲ. ಸರ್. ನಮ್ಮದು ನಮಗಿದೆ ಎಂದು ಹೇಳುತ್ತಾರೆ. ಆದರೆ ನಿಜವಾಗಿಯೂ ಕೂಡ ಅಲ್ಲಿ practical ಆಗಿ ನಿರ್ಣಯಗಳನ್ನು ತೆಗೆದುಕೊಂಡ ಮೇಲೆ ಅಲ್ಲಿ ಅನುಷ್ಠಾನಗೊಳಿಸುವುದಕ್ಕೆ ಕಾರಣ ಈ area of conflict ಇದೆ. ಆದ್ದರಿಂದ ಇವತ್ತು ನೀವೇ ಖುದ್ದಾಗಿ ಇದನ್ನು ಚಿಂತನೆ ಮಾಡಬೇಕು. ಈಗ devolution of political powers ಅಲ್ಲ, administrative powers ಕೂಡ ಕೊಡಬೇಕು. ಇವತ್ತು ಅಧಿಕಾರದ ವಿಕೇಂದ್ರೀಕರಣ ಎಂದರೆ, ಕೇವಲ ನಾವು ರಾಜಕಾರಣಕ್ಕೆ ಅವರನ್ನು ಗ್ರಾಮ ಪಂಚಾಯಿತಿ ಸದಸ್ಯರನ್ನಾಗಿ ಮಾಡಿದ್ದೇವೆ, ಜಿಲ್ಲಾ ಪಂಚಾಯಿತಿ ಸದಸ್ಯರನ್ನಾಗಿ ಮಾಡಿದ್ದೇವೆ ಎಂದು ಅಧ್ಯಕ್ಷರು, ಉಪಾಧ್ಯಕ್ಷರನ್ನಾಗಿ ಮಾಡಿದ್ದೇವೆ ಎಂದು ಅಲ್ಲ. ಅದು political power. ಆದರೆ ಅವರಿಗೆ administrative powers ಏನು ಕೊಟ್ಟಿದ್ದೇವೆ? ಇವತ್ತು ಇಡೀ ಈ ಸದನಕ್ಕೆ administrative power ಇಲ್ಲ ಎಂದು ಹೇಳಿದ್ದರೆ, ಈ ಸದನಕ್ಕೆ ಆಯ್ಕೆಯಾದವರಿಗೆ ಒಂದು ಮಹತ್ವವಿಲ್ಲವೆಂದು ಹೇಳಿದರೆ ನಾವು

ಯಾರೂ ಇಲ್ಲಿ ಬರುವುದಕ್ಕೆ ಇಚ್ಛೆ ಪಡುತ್ತಿರಲಿಲ್ಲ. ವಿಧಾನಸಭೆಯಲ್ಲಿರುವಂತಹ seat of power ಏನಿದೆ, ಇದರ ಮೂಲಕ ಜನ ಕಲ್ಯಾಣ ಕೆಲಸವನ್ನು ಮಾಡಬೇಕೆಂದು ಏನು ಒಂದು ಇಚ್ಛಾಶಕ್ತಿ ಇಲ್ಲಿಂದ ಹೊರಗಡೆ ಹೋಗುತ್ತದೆ, ಅದೇ ರೀತಿ ಅವರಿಗೂ ಕೂಡ ಅನ್ನಿಸಬೇಕು. ನಾವು ಈ ಐದು ವರ್ಷದಲ್ಲಿ ಇಂಥಿಂಥ ಕೆಲಸವನ್ನು ಮಾಡಲಿಕ್ಕೆ ಬಂದಿದ್ದೇವೆ, ನಾವು ಮಡಬೇಕಾಗುತ್ತದೆ ಎನ್ನುವಂತಹ ಒಂದು administrative powers ಕೂಡ ನಾವು ಕೊಡಲೇಬೇಕಾಗುತ್ತದೆ. ಅದನ್ನು ಕೊಟ್ಟಿಲ್ಲ. ಕೊಡುವಂತಹ ಕೆಲಸ ತಾವು ಮಾಡಬೇಕು ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಎಂ.ಎಲ್.ಎ. ಗಳಿಗೆ ಇಲ್ಲ. ಸರ್ಕಾರಕ್ಕೆ ಇದೆ. ನಾನು ಮಾತನಾಡುತ್ತಿರುವುದು ಸರ್ಕಾರಕ್ಕೆ. ವಿಧಾನಸೌಧ ಎಂದರೆ ಕೇವಲ ಶಾಸನಸಭೆ ಅಲ್ಲ. ಸರ್ಕಾರ. Third floor ಬಗ್ಗೆ ಮಾತನಾಡುತ್ತಿರುವುದು ದಯವಿಟ್ಟು ಅರ್ಥ ಮಾಡಿಕೊಳ್ಳಿ. ಇವತ್ತು ಇಲ್ಲಿ Cabinet is all powerfull ಅಲ್ಲವೇ? ಅದನ್ನು ಕಾರ್ಯಗತ ಮಾಡುವುದು ಕಾರ್ಯಾಂಗ. ಅಲ್ಲಿಯೂ ಕೂಡ conflict of areas ಇದೆ ಅದನ್ನು ನಾನು ಹೇಳುತ್ತಿರುವುದು. ಅದು ಇರಲಿ. ಆದರೆ ಇಲ್ಲಿ ಏನೇ ಆದರೂ ಕೂಡ ultimately ಒಂದು system ನಲ್ಲಿ ಅದನ್ನು control ಮಾಡಬಹುದು, ತಿದ್ದಬಹುದು, ಮಾಡಬಹುದು. ಆದರೆ ನಮಗೇ ಇಲ್ಲಿ ಕಷ್ಟವಾಗುತ್ತಿದೆ. ಮಂತ್ರಿಮಂಡಲದಲ್ಲಿ ಒಮ್ಮೊಮ್ಮೆ ಮಂತ್ರಿಗಳ ಕಾರ್ಯವ್ಯಾಪ್ತಿಯನ್ನು ನಡೆಸುವುದೇ ಕಷ್ಟವಾಗುತ್ತದೆ. ಅಂಥದರಲ್ಲಿ ಇವತ್ತು ಆ ಮಟ್ಟದಲ್ಲಿ ಅಂದರೆ ತಳಮಟ್ಟದಲ್ಲಿ ನಡೆಸುವುದು ಎಷ್ಟು ಕಷ್ಟವಾಗುತ್ತದೆ ಎನ್ನುವುದನ್ನು ತಾವು ಅರ್ಥ ಮಾಡಿಕೊಂಡಿದ್ದೀರಿ. ನಮಗೆ ಕಷ್ಟವಾದರೂ ಪರವಾಗಿಲ್ಲ. ಆದರೆ ಅವರಿಗೆ ಕಷ್ಟವಾಗಬಾರದು. Vulnerable ಏನಿದ್ದಾರೆ ಅವರಿಗೆ ಕಷ್ಟವಾಗಬಾರದು.

ಶ್ರೀ ಅಪ್ಪಾಜಿ ಸಿ.ಎಸ್. ನಾಡಗೌಡ:– ತಾವು ಹೇಳುತ್ತಿರುವುದು ಎಲ್ಲೋ ಒಂದು ಕಡೆ ಮತ್ತೆ ಸದನದಿಂದ ಅಥವಾ ನಮ್ಮ ಶಾಸಕರಿಂದ ಏನೋ ಅದನ್ನು ಕಸಿದುಕೊಳ್ಳುತ್ತಿರುವುದು, ಹಸ್ತಕ್ಷೇಪ ಆಗುತ್ತಿರುವಂತಹ ಅರ್ಥ ಬರುತ್ತಿದೆ.

ಶ್ರೀ ಬಸವರಾಜ ಬೊಮ್ಮಾಯಿ:- ಇಲ್ಲ.

ಶ್ರೀ ಅಪ್ಪಾಜಿ ಸಿ.ಎಸ್. ನಾಡಗೌಡ:- ಒಂದು ನಿಮಿಷ ನಾನು ಹೇಳಿಬಿಡುತ್ತೇನೆ.

ಶ್ರೀ ಬಸವರಾಜ ಬೊಮ್ಮಾಯಿ:- ನಾನು ಹೇಳುತ್ತಿರುವುದನ್ನು ಪೂರ್ತಿ ಕೇಳಿ. ಒಂದು ನಿಮಿಷ ಕೇಳಿ.

ಶ್ರೀ ಅಪ್ಪಾಜಿ ಸಿ.ಎಸ್. ನಾಡಗೌಡ:- ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಪಂಚಾಯಿತಿಗೆ ಇರುವ ಅಧಿಕಾರದಲ್ಲಿ ಹಸ್ತಕ್ಷೇಪ ಮಾಡುವಂತಹ ಅಧಿಕಾರ ಯಾರಿಗೂ ಕೂಡ ಇಲ್ಲ. ಅದನ್ನು ಒಪ್ಪುತ್ತೀರಾ? ಅವರು ತಮ್ಮದೇ ಆದಂತಹ ಕ್ರಿಯಾ ಯೋಜನೆಗಳನ್ನು, ಗ್ರಾಮಸಭೆಗಳನ್ನು ಮಾಡಬೇಕಾಗುತ್ತದೆ. ಅನುಷ್ಠಾನಗೊಳಿಸಬೇಕಾಗುತ್ತದೆ.

ಶ್ರೀ ಬಸವರಾಜ ಬೊಮ್ಮಾಯಿ:- ಅದು ಆಗುತ್ತಿಲ್ಲ. ತಾವು ಕಾನೂನನ್ನು ಹೇಳುತ್ತಿದ್ದೀರಿ.

ಶ್ರೀ ಅಪ್ಪಾಜಿ ಸಿ.ಎಸ್. ನಾಡಗೌಡ:- ಕಾನೂನು ಅಲ್ಲ.

ಶ್ರೀ ಬಸವರಾಜ ಬೊಮ್ಮಾಯಿ:- ಒಂದು ನಿಮಿಷ. ಕಾನೂನಿನಲ್ಲಿದೆ, ಅದು ಆಗುತ್ತಿಲ್ಲ.

ಶ್ರೀ ಅಪ್ಪಾಜಿ ಸಿ.ಎಸ್. ನಾಡಗೌಡ:- ಇವತ್ತಿಗೂ ಕೂಡ ಅಲ್ಲಿ ತಿದ್ದುಪಡಿ ತರಬೇಕೆನ್ನುವ ಒತ್ತಡಗಳು ಬಹಳಷ್ಟು ಇವೆ. ಆದರೆ ಇವತ್ತಿಗೂ ಆ ತಿದ್ದುಪಡಿಯನ್ನು ತರುವಂತಹ ವಿಚಾರ ಸರ್ಕಾರ ಮಟ್ಟದಲ್ಲಿ ಇಲ್ಲ. ಏಕೆಂದರೆ ಎಲ್ಲಿ ಸಂಸ್ಥೆಯಲ್ಲಿ ಅದರ ದುರುಪಯೋಗವಾಗುತ್ತದೆ ಅದನ್ನು ಸರಿಪಡಿಸಲಿಕ್ಕೆ ನಾವು ಕಠಿಣ ಕ್ರಮವನ್ನು ಕೈಗೊಳ್ಳಬೇಕು ಎನ್ನುವ ನಿರ್ಣಯ ಇದೆ ಹೊರತಾಗಿ disqualification of members ಮಾಡಬೇಕಾಗುತ್ತದೆ ಎನ್ನುವ ಸಂದರ್ಭ ಬಂದಾಗ ಸರ್ಕಾರ ಅದಕ್ಕೆ ಕ್ರಮ ತೆಗೆದುಕೊಳ್ಳುತ್ತದೆ.

ಶ್ರೀ ಬಸವರಾಜ ಬೊಮ್ಮಾಯಿ:- ಒಂದು ನಿಮಿಷ ಸರ್. ಈಗ ನಾವು ಮಾತನಾಡುತ್ತಿರುವುದು ಕಾನೂನಿನಲ್ಲಿ ಏನು ಅವಕಾಶವಿದೆ, ಏನು provision

ಇದೆ ಅದರಲ್ಲಿ ಯಾವ ರೀತಿ dilution ಆಗಿದೆ ಎನ್ನುವುದು, ಯಾವ ರೀತಿ ಸಂಪೂರ್ಣವಾಗಿ ಅದರ ಬಳಕೆಯಾಗುತ್ತಿದೆ ಎನ್ನುವ ಬಗ್ಗೆ ಮಾತನಾಡುತ್ತಿದ್ದೇವೆ. ಅದು ದುರ್ಬಳಕೆಯಾಗಿದೆ ಎನ್ನುವುದು ಇನ್ನೊಂದು ಮುಖ. ನೀವು ಒಮ್ಮೆಲೇ ಆ end ಗೆ ಹೋಗುತ್ತಿದ್ದೀರಿ. ಒಂದು ನಿಮಿಷ ನಾನು ಮಾತನಾಡುವುದನ್ನು ಕೇಳಿ. ಇವತ್ತು ನಾವು 29 ಇಲಾಖೆಗಳನ್ನು ಮಾಡಿದ್ದೇವೆ. 29 ಇಲಾಖೆಗಳಲ್ಲಿ ಇವತ್ತು ಯಾವ ಅಧಿಕಾರ ಸ್ಪಷ್ಟವಾಗಿ ಆ ಸಂಸ್ಥೆಗಳಲ್ಲಿ ಸಂಪೂರ್ಣವಾದಂತಹ ಅಧಿಕಾರ ಆ ಜಿಲ್ಲಾಮಟ್ಟದಲ್ಲಿ ಮಾಡುವಂಥದ್ದಕ್ಕೆ ಏನು Constitutional provision ಇದೆ ಅದನ್ನು ಅನುಷ್ಠಾನ ಮಾಡುವುದಕ್ಕೆ ಏನು ನಾವು like documents, ಇನ್ನಿತರೆ ಮಾಡಿಕೊಂಡಿದ್ದೇವೆ, through Circulars and through other Government Orders ಅದು dilution ಆಗಿದೆ. ಅದು ಆಗಬಾರದು ಎನ್ನುವ ಮಾತನ್ನು ನಾನು ಹೇಳುತ್ತಿರುವುದು. ನೀವು ಬೇಕಾದರೆ ನಿಮ್ಮ ನಿಮ್ಮ ಜಿಲ್ಲಾ ಪಂಚಾಯಿತಿಯಲ್ಲಿ ನಿಮ್ಮ ಜಿಲ್ಲಾ ಪಂಚಾಯಿತಿ ಮೆಂಬರ್ಸ್ ಹತ್ತಿರ ಮಾತನಾಡಿ ಅದರ ಬಗ್ಗೆ ಏನು ಮಾಹಿತಿ ಇದೆ ಎನ್ನುವುದು ತಮಗೆ ಗೊತ್ತಾಗುತ್ತದೆ. ಎರಡನೆಯದಾಗಿ, devolution of finances ನಲ್ಲಿ ಇವತ್ತು ನಮ್ಮ State Finance Commission and Central Finance Commission ಇದೆ. ನಮಗೆ share of finances Government of India ದಿಂದಲೂ Local bodiesಗೆ ಬರುತ್ತದೆ ಮತ್ತು State Finance commission ಅನ್ನು ಕೂಡ ಮಾಡಿದ್ದೇವೆ. 13ನೇ ಹಣಕಾಸಿನ ಒಂದು Commission Central Government ನಲ್ಲಿದೆ. 4ನೇ Commission ಕೂಡ state ನಲ್ಲಿದೆ. ಅವರು ನಮ್ಮ ಒಟ್ಟು ಆದಾಯದಲ್ಲಿ ನಾವು ಎಷ್ಟು local bodies ಗೆ ಅದನ್ನು devolution ಮಾಡಬೇಕು ಎನ್ನುವಂಥದ್ದರ ಬಗ್ಗೆ ತೀರ್ಮಾನ ಮಾಡುತ್ತಾರೆ. ಇಲ್ಲಿ ಇವತ್ತು ಈ Budgetary provision ಮತ್ತು ಎಲ್ಲವೂ ಕೂಡ ಹೆಚ್ಚಾದಂತೆ ಸರಿಯಾದ ರೀತಿಯಲ್ಲಿ need-based ಒಂದು Budgeting ಆಗಬೇಕು. ಇವತ್ತು Bedget-based need ಅನ್ನು ನಾವು create ಮಾಡಿಕೊಳ್ಳುತ್ತಿದ್ದೇವೆ. Budget-based need ಏನಿದೆ, ಅದರ ಬದಲು need-based ಆಗಬೇಕಾಗಿದೆ.

ಈಗ District Planning Board Constitutionನಲ್ಲಿದೆ. ಮಾನ್ಯ ಮುಖ್ಯಮಂತ್ರಿಯವರು ತಮ್ಮ ಬಜೆಟ್ ಭಾಷಣದಲ್ಲಿಯೂ ಹೇಳಿದ್ದಾರೆ. ನಾವು ಯಾವ ರೀತಿ strengthen ಮಾಡುತ್ತೇವೆ, ಸದುದ್ದೇಶವನ್ನು ಹೇಳಿದ್ದಾರೆ. "As envisaged in 73rd Constitutional amendment action will be taken to ensure that approval of the District Plan Committee is obtained for district plan before implementation, as per provisions of Sections 309 and 310 of Karnataka Panchayat Raj Act"..... ಎನ್ನುವುದನ್ನು ಅವರು ಹೇಳಿದ್ದಾರೆ. ಇವತ್ತು ಎಷ್ಟು District plan ನವರು ಕೆಲಸ ಮಾಡುತ್ತಿದ್ದಾರೆ? District plan ಗೆ local bodies ನಿಂದ election ಆಗಿದೆ ಮತ್ತು ಅಲ್ಲಿ officers ಇದ್ದಾರೆ. ಇವತ್ತು ಎಷ್ಟು ಜನ, ಎಷ್ಟು District plan ಕೆಲಸ ಮಾಡುತ್ತಿದೆ? ಕೊನೆ ಘಳಿಗೆಯಲ್ಲಿ officers ಏನು ಇಟ್ಟಿರುತ್ತಾರೆ ಅದನ್ನು approve ಮಾಡಿ State plan ಗೆ ಕಳುಹಿಸುತ್ತಿದ್ದಾರೆ. ಅಲ್ಲಿ Taluk plan ನಿಂದ ಎಲ್ಲಾ approval ತೆಗೆದುಕೊಂಡು ಎಷ್ಟು District plan ಗಳು ಕೆಲಸ ಮಾಡುತ್ತಿವೆ? Report ಇದೆ. ಯಾವ ರೀತಿ District plan ಕೆಲಸ ಮಾಡುತ್ತಿಲ್ಲ ಎನ್ನುವುದು ನಿಮ್ಮ Government ನ ವರದಿಯಲ್ಲಿದೆ. ಆದ್ದರಿಂದಲೇ ತಾವು strengthening ಮಾಡಬೇಕೆನ್ನುವ ಉದ್ದೇಶವನ್ನು ಇಟ್ಟುಕೊಂಡಿದ್ದೀರಿ. ಇದಕ್ಕಾಗಿ ತಾವು statutory power ಅನ್ನು ಕೊಟ್ಟು District Plan ಅನ್ನು strengthen ಮಾಡಬೇಕು. Planning should go from bottom to top. The devolution of finance should come top to bottom. ಈ ಒಂದು ಆಧಾರವನ್ನಿಟ್ಟುಕೊಂಡು ತಾವು ಕೆಲಸವನ್ನು ಮಾಡಿದರೆ ನಮಗೆ ನಿಜವಾಗಿಯೂ ಕೂಡ ಸರಿಯಾದಂತಹ ಹಣಕಾಸಿನ ವ್ಯವಸ್ಥೆ ಆ ಸಂಸ್ಥೆಗಳಿಗೆ ಮುಟ್ಟುತ್ತದೆ. ಈ ಹಿಂದೆ ಮಾಜಿ ಮುಖ್ಯಮಂತ್ರಿಗಳಾಗಿದ್ದ ಶ್ರೀ ಎಸ್.ಎಂ. ಕೃಷ್ಣರವರ ಕಾಲದಲ್ಲಿ ಒಂದು ಚಿಂತನೆಯು ನಡೆದಿತ್ತು. Devolution of Financeನಲ್ಲಿ Finance Commissionನವರು Urban Local Bodiesದು ಮಾಡುತ್ತಾರೆ, Rural Bodiesದು ಸಹ ಮಾಡುತ್ತಾರೆ. ಆಗ ಒಂದು ಚಿಂತನೆಯು ನಡೆದಿತ್ತು. ಯಾವಾಗ Constitutional amendment ಇಷ್ಟೆಲ್ಲಾ

ಬಂದ ಮೇಲೆ 29 ದೊಡ್ಡ ಇಲಾಖೆಗಳನ್ನು ಕೊಟ್ಟಿದ್ದೇವೆ, 200ಕ್ಕಿಂತ ಹೆಚ್ಚು programmeಗಳನ್ನು ಕೊಟ್ಟಿದ್ದೇವೆ, ಅದಕ್ಕಾಗಿ ದೊಡ್ಡಪ್ರಮಾಣದಲ್ಲಿ ಹಣಕಾಸನ್ನು ಸಹ ಕೊಟ್ಟಿದ್ದೇವೆ. ಇದಕ್ಕೆ ಒಂದು separate ಆಗಿ Panchayat Finance Commission ಅನ್ನು ಏಕೆ ಮಾಡಬಾರದು ಎಂಬ ಚಿಂತನೆ ಆವತ್ತು ನಡೆದಿತ್ತು. ಆದರೆ ಅದು ಮುಂದೆ ಏನೂ ಆಗಲಿಲ್ಲ. ಅದರ ಬಗ್ಗೆ ಅದರ ಸಾಧಕಬಾಧಕಗಳ ಬಗ್ಗೆ ಇವತ್ತಿನ ಪರಿಸ್ಥಿತಿಯಲ್ಲಿ ಚಿಂತನೆ ಏನು ಇದೆ. ಈ ಬಗ್ಗೆ ಸರ್ಕಾರದ ಚಿಂತನೆ ಇದೆಯಾ? ಇದ್ದಲ್ಲಿ ಏನು ಮಾಡುತ್ತೀರಿ? ಎಂದು ಈ ಬಗ್ಗೆ ಚಿಂತನೆ ಮಾಡಬೇಕು. ಅದರ recommendation ಮೇಲೆ ನಿಮ್ಮ budget provisions ಅನ್ನು ಮಾಡಿಕೊಳ್ಳುವುದಕ್ಕೆ need–based budget provision ಎಂದು ನಾವು ಏನು ಹೇಳುತ್ತೇವೆ ಅದರ ಆಧಾರದ ಮೇಲೆ ನೀವು state plan ಮಾಡಬೇಕು. ಅದರ ಆಧಾರದ ಮೇಲೆ state budget provision ಮಾಡಬೇಕು. ಇವತ್ತು 7% of the state plan ಅನ್ನು RDPRಗೆ ನೀವು ಕೊಟ್ಟಿದ್ದೀರಿ. ಅದೇ ರೀತಿಯಾಗಿ Total expenditureನಲ್ಲಿ 20 paisa including Irrigation ಮತ್ತು all Grameen Activitiesಗೆ ನೀವು ಕೊಟ್ಟಿರುವ Agriculture, Irrigation and RDPR ಸೇರಿ out of one rupee which comes to 20 paisa, ಕೊಡುತ್ತೇವೆಂದು ಹೇಳಿದ್ದೀರಿ. ಆದ್ದರಿಂದ ನೀವು ಇದನ್ನು scientific ಆಗಿ ಹೆಚ್ಚಿಸಬೇಕೇ? ಅಥವಾ ಇರುವುದನ್ನು ಸರಿಯಾಗಿ ಉಪಯೋಗಿಸಿಕೊಳ್ಳಬೇಕೇ? ಈ ಎರಡು ಪ್ರಶ್ನೆಗಳು ಇವೆ. ಒಂದು ಕಡೆಯಲ್ಲಿ ಇರುವುದು ಸರಿಯಾಗಿ ಉಪಯೋಗವಾಗಲಿಲ್ಲ, ಸರಿಯಾಗಿ ಮುಟ್ಟಿಲ್ಲ, ದುರುಪಯೋಗವಾಗುತ್ತಿದೆ ಎನ್ನುವಂತಹ ಒಂದು ಕಡೆಯಲ್ಲಿ ನಮ್ಮ ಅನುಭವ ಇದ್ದರೆ ಇನ್ನೊಂದು ಕಡೆಯಲ್ಲಿ ಹೆಚ್ಚಿನ ದುಡ್ಡನ್ನು ಒಂದೊಂದು ಪಂಚಾಯಿತಿಗೆ ಹೆಚ್ಚಿನ untied fund ಅನ್ನು ಕೊಡಬೇಕೆಂದು ಈಗಾಗಲೇ ಮಾನ್ಯ ಶಾಸಕರು ಹೇಳಿದರು. ಇದನ್ನು ನೀವು ಯಾವ ರೀತಿಯಾಗಿ ಮಾಡುತ್ತೀರಿ. ಇದಕ್ಕೊಂದು independent Finance Commission ಮಾಡುತ್ತೀರಾ ಏನು? ಎನ್ನುವಂತಹ ಚಿಂತನೆಯನ್ನು ಸರ್ಕಾರ ಮಾಡಬೇಕಾಗುತ್ತದೆ. ಅದರ ಬಗ್ಗೆ ತಮ್ಮ ನಿಲುವು ಏನು ಎಂದು ತಿಳಿಸಬೇಕಾಗುತ್ತದೆ. ಸರ್ಕಾರದ C & R Rules ಮಾಡಿದ್ದಾರೆ.

ನಮ್ಮ ಸರ್ಕಾರವು ಅಧಿಕಾರದಲ್ಲಿದ್ದಾಗ ಅದು initiate ಆಯಿತು. ಆದರೆ ಇನ್ನೂ ಪೂರ್ಣಪ್ರಮಾಣದಲ್ಲಿ ಅದು implement ಆಗುತ್ತಿಲ್ಲ. ಉದಾಹರಣೆಗೆ ಇಂಜಿನಿಯರಿಂಗ್ ಇವತ್ತು ನಾವು ಕೂಡ ಪ್ರಯತ್ನ ಮಾಡಿದ್ದೇವೆ. Irrigation, PWD, RDPR ಈ ಮೂರು ಇಲಾಖೆಗಳನ್ನು bifurcate ಮಾಡಿ ಯಾರ್‍ಯಾರು ಆಯ್ಕೆ ಮಾಡುತ್ತಾರೆ ಆ ಇಲಾಖೆಯಲ್ಲಿ ಅವರೆ ಮುಂದುವರೆಯಬೇಕಾ ಅಥವಾ dedicated services ಆಗಬೇಕಾ? ಇಲ್ಲಿ ಅವರು ಕೆಲಸ ಮಾಡುವುದಿಲ್ಲ. ಅವರು ಆಪಾದನೆ ಬಂದ ಮೇಲೆ RDPRನಲ್ಲಿ suspension order ಬಂದರೆ PWD ಇಲಾಖೆಗೆ ಹೋಗುತ್ತಾರೆ, PWDಯಲ್ಲಿ ಏನಾದರೂ ಅವ್ಯವಹಾರ ಆದರೆ Irrigation Departmentಗೆ ಬರುವುದು, Irrigation Departmentನಲ್ಲಿ ಅವ್ಯವಹಾರ ಆದರೆ RDPR ಇಲಾಖೆಗೆ ಬರುವುದು ಅಥವಾ Slum Boardಗೆ ಹೋಗುವುದು, ಈ ತರಹದ ವ್ಯವಸ್ಥೆ ಏನು ಇದೆ ಇದು ಇಡೀ ವ್ಯವಸ್ಥೆಯನ್ನು ಕುಲಗೆಡಿಸುವಂತಹ ಕೆಲಸ ಆಗಿದೆ. ಎಲ್ಲಿಯೂ responsibility ಇಲ್ಲ. ಆದ್ದರಿಂದ ನೀವು ಏನು C & R Rules ಮಾಡಿದ್ದೀರಿ ಅದರಲ್ಲಿ ನಿಮ್ಮ ಇಲಾಖೆಗೆ ಎಷ್ಟು ಇಂಜಿನಿಯರ್‌ಗಳು ಬೇಕು ಅವರನ್ನು ನೀವು ಆಯ್ಕೆ ಮಾಡಿ mother department PWD ಏನು ಇದೆ PWD ಇಲಾಖೆಯು ಅದು ಎಲ್ಲಾ ಭಾರವನ್ನು ಹೊರುತ್ತಿದೆ. ಆ ಇಲಾಖೆಗೆ ನೀವು ಸ್ವಲ್ಪ ಭಾರವನ್ನು ಕಡಿಮೆ ಮಾಡಬೇಕು. ಇವತ್ತು Irrigation Departmentಗೆ Budget allocation ಜಾಸ್ತಿ ಇದೆ. RDPR Departmentಗೆ Budget Allocation ಹೆಚ್ಚಾಗುತ್ತಿದೆ. Urban Development Departmentಗೆ ಹೆಚ್ಚಾಗುತ್ತಿದೆ. Urban Developmentನಲ್ಲಿ ನಿಮ್ಮ ಮುನಿಸಿಪಾಲಿಟಿಯಲ್ಲಿ ಇಂಜಿನಿಯರ್‌ಗಳೇ ಇಲ್ಲ. ನಿಮ್ಮ PMGSYಯಲ್ಲಿ ಇಂಜಿನಿಯರ್‌ಗಳು ಕಡಿಮೆಯಾಗುತ್ತಿದ್ದಾರೆ. ನಿಮ್ಮ ಇಂಜಿನಿಯರಿಂಗ್ ವಿಭಾಗ ಏನಿದೆ ಅವರನ್ನು Mother Departmentನಲ್ಲಿ bifurcation ಮಾಡಿ ನಿಮ್ಮ C & R Rules ಪ್ರಕಾರ ನಿಮ್ಮಲ್ಲಿಗೆ ಯಾರ್‍ಯಾರು ಬರುತ್ತಾರೆಂದು ತಿಳಿದುಕೊಂಡು ಅವರಿಗೆ ಇಲ್ಲಿಯೆ ಇರುವುದಕ್ಕೆ services ವ್ಯವಸ್ಥೆಯನ್ನು ಮತ್ತು responsibility ಅನ್ನು fix ಮಾಡುವುದಕ್ಕೆ ತಾವು ತೀರ್ಮಾನವನ್ನು ನಿಮ್ಮ ಕಾಲದಲ್ಲಿ ಮಾಡಬೇಕು ಏಕೆಂದರೆ ಅದು ಮುಂದೆ

ಆಗುವುದಿಲ್ಲ ಆ ಕಾರಣದಿಂದ ಮಾಡಬೇಕೆನ್ನುವಂತಹ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇಲ್ಲಿ ಆಡಿಟ್ ಇದೆ, ಮೊದಲು ಒಂದು ಕಾಲದಲ್ಲಿ ಆಡಿಟ್ ಬೇಡ ಎನ್ನುವಂತಹ ಮಾತು ಬಂತು. CAGಯವರು oppose ಮಾಡಿದರು ಕಡೆಗೆ state audit ಎಲ್ಲವೂ ಇದೆ. ಈಗ ತಾನೇ ಅವರು ವರದಿಯನ್ನು ಕೂಡ ಮಂಡಿಸಿದ್ದಾರೆ. ಆದರೆ Social Audit ನಾವು ಏನು ನಮ್ಮ actನಲ್ಲಿ ನಮ್ಮ Consitutionನಲ್ಲಿಯೂ ಕೂಡ ಜಮಾ ಬಂದಿ, ಇತರ ಆಡಿಟ್ ಏನು ಇದೆ ಆ ಆಡಿಟ್‌ಗೆ ತಾವು ಹೆಚ್ಚಿನ ಮಹತ್ವವನ್ನು ಕೊಡಬೇಕು. ಅದಕ್ಕೆ ಇವತ್ತಿನದಿವಸ ಮಹತ್ವ ಇಲ್ಲದಾಗಿದೆ. ಅದಕ್ಕಾಗಿ ನಿಮ್ಮ ಇಲಾಖೆಯಲ್ಲಿ ಹೆಚ್ಚಿನ ಮಹತ್ವವನ್ನು ಕೊಡಬೇಕಾಗಿದೆ. ನಾನು ಈ ಬಗ್ಗೆ ಹೆಚ್ಚಿನ ವಿವರಗಳನ್ನು ಹೇಳುವುದಕ್ಕೆ ಹೋಗುವುದಿಲ್ಲ. ಈ ಬಗ್ಗೆ ತಮಗೆಲ್ಲಾ ಗೊತ್ತಿದೆ. ಅದಕ್ಕೆ ನೀವು ಮಹತ್ವವನ್ನು ಕೊಟ್ಟಿದ್ದೆ ಆದರೆ ನಿಮ್ಮ assets ಎಲ್ಲವೂ ಕೂಡ ಮತ್ತು even public assets in that Gramapanchayat, it is not only Gramapanchayat assets, public assets in the Gramapanchayat ಕೂಡ ನಮಗೆ ಸಂಪೂರ್ಣವಾಗಿ ವಿವರವು ಸಿಗುತ್ತದೆ ಅದರ ರಕ್ಷಣೆಯೂ ಕೂಡ ಆಗುತ್ತದೆ ಎನ್ನುವಂತಹ ಮಾತನ್ನು ಈ ಸಂದರ್ಭದಲ್ಲಿ ಹೇಳವುದಕ್ಕೆ ಇಚ್ಛೆಪಡುತ್ತೇನೆ. ಮಾನ್ಯ ಉಪಾಧ್ಯಕ್ಷರೆ, ಈ Drinking Water ಬಗ್ಗೆ ಹೇಳಿದ್ದಾರೆ. ಆ ಬಗ್ಗೆ ನಾನು ಹೇಳುವುದಕ್ಕೆ ಹೋಗುವುದಿಲ್ಲ. ಇಲ್ಲಿ ತಾವು ಒಂದು ಕೆಲಸವನ್ನು ಮಾಡಬಹುದು. ಸುಮಾರು 30,000 ಕ್ಕಿಂತ ಹೆಚ್ಚು ಕೆರೆಗಳ ಬಗ್ಗೆ ಈಗಾಗಲೇ water bodiesಅನ್ನು ನಮ್ಮ ರಾಜ್ಯ ಸರ್ಕಾರದವರು satellite mapping ಮಾಡಿದ್ದಾರೆ. 33,000 water bodies ಅನ್ನು seteliteನಲ್ಲಿ mapping ಮಾಡಿದ್ದಾರೆ. ಅದನ್ನು ನಿಮ್ಮ water supply schemesಗೆ ನೀವು ಅದನ್ನು link up ಮಾಡುವುದಕ್ಕೆ ಸಾಧ್ಯವೇ? ಅದನ್ನು ಮಾಡಿದರೆ ಯಾವುದು nearest ಯಾವುದರಿಂದ ಏನು ಮಾಡಬಹುದು, ಎಷ್ಟು capacity ಇದೆ ಅದರ ಬಗ್ಗೆ ತಾವು ಚಿಂತನೆಯನ್ನು ಮಾಡಬೇಕು. ಈ ಬಗ್ಗೆ linkage ಮಾಡಿ.

ಶ್ರೀ ಬಸವರಾಜ ರಾಯರೆಡ್ಡಿ:– ಮಾನ್ಯ ಸದಸ್ಯರು Irrigationಗೆ ಸಂಬಂಧಿಸಿದಂತೆ ಮಾತನಾಡಿದರು. ಈಗ Minor Irrigation Tanks, Small

Tanks ಎಲ್ಲವೂ ಇದೆ. ಅವೆಲ್ಲವನ್ನು ಕೂಡ ನೀವು ಅಲ್ಲಿ ನೀರಿನ ಹಂಚಿಕೆ ಆಗಿದೆ. ಅವೆಲ್ಲವೂ ಕೂಡ ಅದರ ವ್ಯಾಪ್ತಿಯಲ್ಲಿಯೇ ಬರುತ್ತದೆ. ನನ್ನ ಪ್ರಕಾರ ಹೇಳುವುದಾದರೆ, ಹೀಗಾಗಿ ಅಲ್ಲಿ ನೀರಿನ ಲಭ್ಯತೆ ಇಲ್ಲ. ಈಗ ಕಾನೂನಿನ ಸಮಸ್ಯೆ ಆಗುತ್ತದೆ. ನೀವು ಹೇಗೆ ನೀರನ್ನು ತೆಗೆದುಕೊಳ್ಳುತ್ತೀರಿ. You count beyond 729 TMC + 166 + 23 in Krishna. ನೋಡಿ ಸಣ್ಣ ಸಣ್ಣ ಕೆರೆಗಳು ಇದೆಯಲ್ಲಾ ಆ ನೀರನ್ನು ಹಿಡಿದುಕೊಂಡೆ ನೀವು ಮಾಡಿರುತ್ತೀರಿ.

ಶ್ರೀ ಬಸವರಾಜ ಬೊಮ್ಮಾಯಿ:- ಮಾನ್ಯ ರಾಯರೆಡ್ಡಿಯವರೆ, ಆ ವಿಚಾರವೇ ಬೇರೆ ಈ ವಿಚಾರವೇ ಬೇರೆ. ಆ ವಿಷಯಕ್ಕೆ ಸಂಬಂಧಿಸಿದಂತೆ ನಾನು debate ಮಾಡುವುದಕ್ಕೆ ತಯಾರಾಗಿದ್ದೇನೆ, ಪ್ರಶ್ನೆ ಇಲ್ಲ. ನೀವು ರಾಜ್ಯದ ಹಿತಾಸಕ್ತಿಯಿಂದ ನಮ್ಮ ಕುಡಿಯುವ ನೀರಿಗೆ priority ಯನ್ನು ಕೊಡಬೇಕೆಂದು Supreme Courtನ ಆದೇಶ ಇದೆ. ನಮ್ಮನಮ್ಮ ನೀರನ್ನು ಯಾವ ರೀತಿಯಾಗಿ ಬಳಕೆ ಮಾಡಿಕೊಳ್ಳಬೇಕು ಅದಕ್ಕೆ ಸಂಪೂರ್ಣ ಸ್ವಾತಂತ್ರ್ಯ ಇದೆ. ಅದನ್ನು ಬಳಕೆ ಮಾಡಿ highest priority ಇದಕ್ಕೆ ಕೊಡಬೇಕೆನ್ನುವಂತಹ ದೃಷ್ಟಿಯಿಂದ ನೀವು ಈ ಬಗ್ಗೆ re-plan ಮಾಡಿಕೊಳ್ಳಬಹುದು ಏನು ಬೇಕಾದರೂ ಮಾಡಿಕೊಳ್ಳಬಹುದು. ಆದ್ದರಿಂದ ಈಗಾಗಲೇ Minor Irrigationನಲ್ಲಿ allocation ಇದೆ. Major Irrigationನಲ್ಲಿಯೂ ಕೂಡ allocation ಇದೆ within that ಏನು ಬೇಕಾದರೂ ಮಾಡಿಕೊಳ್ಳಬಹುದು.

ಶ್ರೀ ಬಸವರಾಜ ರಾಯರೆಡ್ಡಿ:- ನಮ್ಮ ನೀರಾವರಿ ಪ್ರಮಾಣ ಕಡಿಮೆಯಾಗುತ್ತದೆ.

ಶ್ರೀ ಬಸವರಾಜ ಬೊಮ್ಮಾಯಿ:- ತಾವು ಒಂದು ನಿಮಿಷ ಕೇಳಿ. ಕೆಲವು water bodies ಅನ್ನು ಪೂರ್ಣ ಪ್ರಮಾಣದ Minor Irrigation Tanks ಅನ್ನು ಪೂರ್ಣ ಪ್ರಮಾಣದಲ್ಲಿ ಬಳಕೆಯಾಗುತ್ತಿಲ್ಲ for different reasons. ಕೆಲವು Lift Irrigation defunct ಆಗಿದೆ. ನಮ್ಮ Canal systemಗಳು defunct ಆಗಿದೆ. ಇಲ್ಲಿ ಬೇಕಾದಷ್ಟು ಅವಕಾಶಗಳು ಇವೆ. ಅದು ಇನ್ನೊಂದು ವಿಷಯ. ನಮ್ಮ ರಾಯರೆಡ್ಡಿಯವರು ಹಾಗೆಯೇ ವಾದ ಮಾಡುತ್ತಾರೆ.

ಉಪಾಧ್ಯಕ್ಷರು:- ಮಾನ್ಯ ಬೊಮ್ಮಾಯಿಯವರೆ, ತಾವು conclude ಮಾಡಿ.

ಶ್ರೀ ಬಸವರಾಜ ಬೊಮ್ಮಾಯಿ:- ನಾವು practical ಆಗಿ ಮಾತನಾಡುತ್ತೇವೆ.

ಉಪಾಧ್ಯಕ್ಷರು:- ಆ ಇಲಾಖೆಯದು ಬಂದಾಗ ಚರ್ಚೆ ಮಾಡೋಣ.

(ಗೊಂದಲ)

ಶ್ರೀ ಬಸವರಾಜ ಬೊಮ್ಮಾಯಿ:- ಅಲ್ಲಿ practical ಆಗಿ ಮಾಡುವುದಕ್ಕೆ ಸಾಧ್ಯವಿದೆ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ:- ತಾವು ಈ ಬಗ್ಗೆ ಯಾವ ರೀತಿಯಾಗಿ plan ಮಾಡುತ್ತೀರಿ. ಕುಡಿಯುವ ನೀರಿಗಾಗಿ 120 ಟಿಎಂಸಿ ಇದೆ.

ಉಪಾಧ್ಯಕ್ಷರು:- ಇಲಾಖೆ ಮೇಲೆ ಚರ್ಚೆ ಬಂದಾಗ ಮಾತನಾಡಿ.

ಶ್ರೀ ಬಸವರಾಜ ರಾಯರೆಡ್ಡಿ:- ನನ್ನ ಪ್ರಕಾರ ಅವರು ಪಶ್ಚಿಮವಾಹಿನಿಯ ನೀರನ್ನು ತೆಗೆದುಕೊಳ್ಳಬೇಕು.

ಉಪಾಧ್ಯಕ್ಷರು:- ಮಾನ್ಯ ರಾಯರೆಡ್ಡಿಯವರೆ,... ಮಾನ್ಯ ಬೊಮ್ಮಾಯಿಯವರೆ ತಾವು conclude ಮಾಡಿ.

ಶ್ರೀ ಬಸವರಾಜ ಬೊಮ್ಮಾಯಿ:- ಬೇಕಾದಷ್ಟು ಯೋಜನೆಗಳು ಈಗಾಗಲೇ ಮಾಡಿದ್ದೇವೆ. ನೋಡಿ ಎರಡು ಜಿಲ್ಲೆಗಳನ್ನು ಹಿಂದಿನ ಸರ್ಕಾರದಲ್ಲಿ ಕುಡಿಯುವ ನೀರಿಗಾಗಿ 100% Drinking Water Tap water ಕೊಡಬೇಕು surface water ಕೊಡಬೇಕೆಂದು ಎರಡು ಜಿಲ್ಲೆಗಳನ್ನು ನಾವು total survey ಮಾಡಿಸಿದ್ದೆವು. ಇದರಲ್ಲಿ ಒಂದು ಚಿತ್ರದುರ್ಗ ಜಿಲ್ಲೆ ಎಲ್ಲಿ water scarcity ಇದೆ, ಇನ್ನೊಂದು ಬಿಜಾಪುರ ಜಿಲ್ಲೆ ಅಲ್ಲಿ 5 ದಿನಗಳಲ್ಲಿ ನೀರು ಇದ್ದರೂ ಕೂಡ Drinking water scarcity ಇದೆ. ಎರಡು ವ್ಯತಿರಿಕ್ತವಾದಂತಹ ಸನ್ನಿವೇಶದಲ್ಲಿ ಸಂಪೂರ್ಣ DPR ready ಇದೆ. ಪ್ರತಿಯೊಂದು householdಗೆ

ನಾವು ಎಷ್ಟು ನೀರನ್ನು ಕೊಡಬೇಕು Tap Water ಕೊಡಬೇಕೆಂದು ಇದೆ. ಎರಡು different ಸನ್ನಿವೇಶಗಳನ್ನು ಕೂಡ ನಾವು ಮಾಡಿದ್ದೇವೆ. ಅದರ ಆಧಾರದ ಮೇಲೆ ನೀವು ನಿಮ್ಮ surface water ಅನ್ನು ಯಾವ ರೀತಿಯಾಗಿ maximum use ಮಾಡಬೇಕೆಂದು ಈಗಾಗಲೇ ಅವರು 80 ಟಿಎಂಸಿ ಮಾಡಬೇಕೆಂದು ಹೇಳಿದ್ದಾರೆ. ಅವರು ನೀರು ಬೇಕಾಗುತ್ತದೆ ಎಂದು statement ಕೊಟ್ಟಿರುವುದನ್ನು ನಾನು ನೋಡಿದ್ದೇನೆ. ಆದ್ದರಿಂದ ಅದನ್ನು ನೀವು ಯಾವ ರೀತಿಯಾಗಿ ಮಾಡುತ್ತೀರಿ? ನೀರನ್ನು ಎಲ್ಲಿಂದ ತರುತ್ತೀರಿ? ಈ ಬಗ್ಗೆ ಯಾವ ರೀತಿಯಾಗಿ planning ಮಾಡುತ್ತೀರಿ ಎನ್ನುವುದು ಕೂಡ ನಮ್ಮ ಇಡೀ ಸದನದ ಮುಖಾಂತರ ರಾಜ್ಯಕ್ಕೆ ಗೊತ್ತಾಗಬೇಕು. ದಯವಿಟ್ಟು ನಿಮ್ಮ plan ಏನಿದೆ ಎನ್ನುವುದನ್ನು ತಾವು ಹೇಳಬೇಕೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇನ್ನು ಎರಡನೆಯದಾಗಿ ಹೇಳುವುದಾದರೆ ಈ road ಅನ್ನು complete mapping ಮಾಡಬೇಕು. Electricity ಎಲ್ಲೆಲ್ಲಿ movement ಆಗುತ್ತದೆ. ಎಷ್ಟೆಷ್ಟು watts ಎಲ್ಲೆಲ್ಲಿ ಹೋಗುತ್ತದೆ ಏನಿದೆ ಆ system ಅನ್ನು Roads ಕೂಡ ತರಬೇಕು. ನೀವು ಮಾಡಿರುವ ರೋಡ್‌ಗೆ ಹಣ ಕೊಡುವಂತಹ ಒಂದು ಅವಶ್ಯಕತೆ ತಪ್ಪುತ್ತದೆ. ಹೊಸ ರೋಡ್‌ಗಳನ್ನು ತಾವು ಮಾಡಬಹುದು. Roadಗಳನ್ನು scientific ಆಗಿ ಮಾಡಬಹುದು. ಓಬಡ್ಸಮನ್ ಬಗ್ಗೆ ಹೇಳುವುದಾದರೆ ಈ system ನಮಗೆ ಯಶಸ್ವಿಯಾಗಿದೆ ಎಂದು ನನಗೆ ಅನಿಸುತ್ತಿಲ್ಲ. ಅದು ಒಂದು ಒಳ್ಳೆಯ intention ಇರುವುದಷ್ಟೆ. ಒಳ್ಳೆಯ ಭಾವನೆ ಇಲ್ಲಿ ಅವ್ಯವಹಾರ ಆದರೆ ಅದನ್ನು ತಡೆಗಟ್ಟಬಹುದು. ಮಾರ್ಗದರ್ಶನವನ್ನು ಮಾಡಬಾರದು ಎನ್ನುವ ಭಾವನೆ ಮತ್ತೆ ಅದಕ್ಕೆ ಪೂರ್ಣವಾದಂಥ ಒಂದು ಅಧಿಕಾರವು ಇಲ್ಲ ಅಥವಾ ಅಧಿಕಾರ ಇಲ್ಲವೆಂದೂ ಸಹ ಇಲ್ಲ. Ombudsman ಬಗ್ಗೆ, ಅವರ powers ಬಗ್ಗೆ ತಾವು ಸ್ಪಷ್ಟತೆಯನ್ನು ದಯವಿಟ್ಟು ಕೊಡಬೇಕು. ಏಕೆಂದರೆ effect ಆಗುತ್ತಿಲ್ಲ ಮತ್ತು ಪೂರ್ಣ ಪ್ರಮಾಣದಲ್ಲಿ Ombudsman ಸಿಗುತ್ತಿಲ್ಲ ಎನ್ನುವಂಥ ಕೂಗು ಕೂಡ ಇದೆ. Change ಮಾಡಿ. ನಿಮಗೆ retired judgeಗಳೇ ಬೇಕೆಂದಿಲ್ಲ, sitting judge ಹಾಕಿ ಯಾರಾದರೂ ಹಾಕಿ. ಆದರೆ you empower them. ನೀವು empower

ಮಾಡದೇ ಏನೂ ಮಾಡಲಿಕ್ಕಾಗುವುದಿಲ್ಲ. ಆದ್ದರಿಂದ ದಯವಿಟ್ಟು ಎಲ್ಲೆಲ್ಲಿ ಈ ಅವ್ಯವಹಾರಗಳು ನಡೆದಿವೆ ಅಲ್ಲಿ ಇನ್ನಷ್ಟು ನಿರ್ದಾಕ್ಷಿಣ್ಯವಾಗಿ ಕ್ರಮವನ್ನು ತೆಗೆದುಕೊಳ್ಳಲು ಅದಕ್ಕೆ ಏನಾದರೂ ಹೆಚ್ಚಿನ empowerment ಅವಶ್ಯಕತೆ ಇದ್ದರೆ ತಾವು ದಯವಿಟ್ಟು Ombudsman ಬಗ್ಗೆ ಹೆಚ್ಚಿನ ವಿಚಾರವನ್ನು ತಮ್ಮ ಉತ್ತರದಲ್ಲಿ ಹೇಳಬೇಕೆಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಕೊನೆಯದಾಗಿ ಏನು ನಮ್ಮ ಸಂವಿಧಾನದ ಮತ್ತು ಹಿರಿಯರ ಆಶಯವಾಗಿದೆ, ಮಹಾತ್ಮ ಗಾಂಧೀಜಿಯವರಿಂದ, ನಜೀರ್ ಸಾಬ್‌ರವರಿಂದ ಹಿಡಿದು ಅದನ್ನು ಪೂರ್ಣ ಪ್ರಮಾಣದಲ್ಲಿ ಅನುಷ್ಠಾನ ಮಾಡುವಂಥ ಒಂದು ಹೊಸ ಹಾದಿ ಹೊಸ ದಿಕ್ಸೂಚಿ ನಮ್ಮ ಮಂತ್ರಿಗಳಿಂದ ಸಿಗಲಿ, ಈ ಸದನದಿಂದ ಸಿಗಲಿ ಎಂಬ ಆಶಾಭಾವನೆಯಿಂದ ನನ್ನ ಮಾತನ್ನು ಮುಗಿಸುತ್ತೇನೆ. ಧನ್ಯವಾದಗಳು.

ಉಪಾಧ್ಯಕ್ಷರು:- ರೇವಣ್ಣನವರು ಮಾತನಾಡಿ, last, but one ನೀವೊಬ್ಬರೇ. ಬಹಳಷ್ಟು ಚರ್ಚೆಯಾಗಿದೆ, ಮಂತ್ರಿಗಳು ಉತ್ತರ ಕೊಡಬೇಕು.

ಶ್ರೀ ಹೆಚ್.ಡಿ. ರೇವಣ್ಣ (ಹೊಳೆನರಸೀಪುರ):- ಮಾನ್ಯ ಉಪಾಧ್ಯಕ್ಷರೆ, ಇವತ್ತು ಪಂಚಾಯತ್ ರಾಜ್ ವ್ಯವಸ್ಥೆ ಬಗ್ಗೆ debate ಮಾಡಲಿಕ್ಕೆ ಕಳೆದ 25 ವರ್ಷಗಳಿಂದ ಅವಕಾಶ ಸಿಕ್ಕಿರಲಿಲ್ಲ. ಈಗ ಎಲ್ಲಾ ಸದಸ್ಯರಿಗೆ ಪ್ರತಿಯೊಂದು ಇಲಾಖೆ ಬಗ್ಗೆ ತಾವು debate ಮಾಡಿ ಆ ಇಲಾಖೆಯಲ್ಲಿ ಏನು ಕಾರ್ಯಕ್ರಮವನ್ನು ಮಾಡುತ್ತಿದ್ದಾರೆ ಎನ್ನುವುದರ ಬಗ್ಗೆ ಸದಸ್ಯರಿಗೆ ಒಂದು ಮನವರಿಕೆ ಮಾಡುವುದಕ್ಕೆ ಸಭಾಧ್ಯಕ್ಷರು ಅವಕಾಶ ಮಾಡಿಕೊಟ್ಟಿದ್ದಕ್ಕೆ ಮೊದಲನೆಯದಾಗಿ ಸಭಾಧ್ಯಕ್ಷರಿಗೆ ಅಭಿನಂದನೆಯನ್ನು ಸಲ್ಲಿಸಿ ಇವತ್ತು ಪಂಚಾಯತ್ ರಾಜ್ ಮೊದಲನೇ ಹಂತ 1985ರಲ್ಲಿ ಪ್ರಾರಂಭವಾಯಿತು, 1985 ರಲ್ಲಿ ಪ್ರಾರಂಭವಾಗಿ ಅಂದು ತಾಲ್ಲೂಕು ಸಲಹಾ ಸಮಿತಿ ಮತ್ತು ಗ್ರಾಮ ಪಂಚಾಯಿತಿ ಎರಡು ಹಂತಗಳಿವೆ, ಆಮೇಲೆ ಜಿಲ್ಲಾ ಪಂಚಾಯಿತಿ ಬಂದಿತು. ಅದಾದ ಮೇಲೆ 1993ರ ತಿದ್ದುಪಡಿಗೆ ತಾವು ತಂದಿದ್ದೀರಿ, ನಾನು ಹಿಂದಿನದ್ದೆಲ್ಲಾ ಹೆಚ್ಚಿಗೆ ಹೇಳುವುದಕ್ಕೆ ಹೋಗುವುದಿಲ್ಲ. ನಮ್ಮ ಸನ್ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರು, ಸರ್ಕಾರದ ಸುತ್ತೋಲೆ 85 ತಾಲ್ಲೂಕು

ಪಂಚಾಯಿತಿ ಸಮಿತಿ 2007–11 ಗ್ರಾಮೀಣ ಜನಜೀವನ ಮಟ್ಟವನ್ನು ಸುಧಾರಿಸಲು 15 ಮೂಲಭೂತ ಸೌಲಭ್ಯಗಳನ್ನು ಕೊಟ್ಟಿದಾರೆ. ಅವುಗಳಾವುವೆಂದರೆ "ನಮ್ಮ ಊರು ನಮ್ಮ ಕೆರೆ", ಮನೆಗೊಂದು ಶೌಚಾಲಯ, ಸಂಜೀವಿನಿ ಜೀವನೋಪಾಯ, ರೈತರ ಭೂ ಅಭಿವೃದ್ಧಿ, ಅದೇರೀತಿ ಆಟದ ಮೈದಾನ ಇತ್ಯಾದಿ 14 ಯೋಜನೆಗಳ ಬಗ್ಗೆ ಪುಸ್ತಕವನ್ನು ಪ್ರಿಂಟ್ ಮಾಡಿ ಕಳುಹಿಸಿಕೊಟ್ಟಿದ್ದಾರೆ. ನಾವು ಹೇಳಬೇಕಲ್ಲವೇ? ಒಂದು ಉದಾಹರಣೆಗೆ ಕೊಡುವುದಾದರೆ ಮಹಾತ್ಮ ಗಾಂಧೀಜಿ, ನರೇಗಾ ಕಾರ್ಯಕ್ರಮ ಏನಿದೆ, 2006–07 ರಲ್ಲಿ 5 ಜಿಲ್ಲೆಗಳು ಆರಂಭವಾಗಿವೆ. ಅಂದು 78.00 ಕೋಟಿ ರೂಪಾಯಿಗಳನ್ನು ಇಟ್ಟಿದ್ದರು. ಅದರಲ್ಲಿ ಖರ್ಚು ಮಾಡಿರುವುದು ಕೇವಲ 25.00 ಕೋಟಿ ರೂಪಾಯಿಗಳು. ಅದೇ ರೀತಿ 2007–08 ರಲ್ಲಿ 11 ಜಿಲ್ಲೆಗಳು ಆರಂಭವಾದವು, ಅದಕ್ಕೆ 1234 ಕೋಟಿ ರೂಪಾಯಿಗಳಲ್ಲಿ ಕೇವಲ 236 ಕೋಟಿ ರೂಪಾಯಿಗಳು ಮಾತ್ರ ಖರ್ಚಾಯಿತು. 2008, 2009, 2010 ಇವೆಲ್ಲವನ್ನು ಲೆಕ್ಕ ಹಾಕಿಕೊಂಡರೆ ನಮ್ಮಲ್ಲಿ ಎಷ್ಟು ಹಣ ಖರ್ಚಾಗಿದೆ ಎಂದು ಹೇಳಬೇಕಾಗಿದೆ. 2008–09 ರಲ್ಲಿ ಕೇವಲ ` 357.00 ಕೋಟಿ. 2009–10 ರಲ್ಲಿ ` 2214.00 ಕೋಟಿ, 2010–11 ರಲ್ಲಿ ` 1860 ಕೋಟಿ, 2011–12 ರಲ್ಲಿ ` 1640 ಕೋಟಿ, ಇದೇರೀತಿ ಇವತ್ತು 2013–14 ಕ್ಕೆ 2095.00 ಕೋಟಿ ರೂಪಾಯಿಗಳಾಗಿವೆ. ನಮ್ಮ ರಾಜ್ಯವನ್ನು ಬೇರೆ ರಾಜ್ಯಗಳಿಗೆ ಹೋಲಿಸಿದರೆ ನಮ್ಮ ರಾಜ್ಯ ನರೇಗಾ ಏನು ಮಹಾತ್ಮ ಗಾಂಧೀಜಿ ಗ್ರಾಮೀಣ ಉದ್ಯೋಗ ಖಾತ್ರಿಯಲ್ಲಿ ಇಡೀ ರಾಷ್ಟ್ರದಲ್ಲಿ ನಮ್ಮ ರಾಜ್ಯ 15ನೇ ಸ್ಥಾನದಲ್ಲಿದೆ ಎಂದು ಹೇಳಬೇಕಾಗುತ್ತದೆ. ಉದಾಹರಣೆಗೆ ಹೇಳಬೇಕಾದರೆ ಆಂಧ್ರ ಪ್ರದೇಶ, 2013–14ನೇ ಸಾಲಿನಲ್ಲಿ 4,750 ಕೋಟಿ ರೂಪಾಯಿಗಳಷ್ಟು ಹಣ ಖರ್ಚು ಮಾಡಿದ್ದಾರೆ. ಅದೇ ರೀತಿ 2014–15 ರಲ್ಲಿ ಜೂನ್ ತಿಂಗಳಿನಲ್ಲಿ 4235 ಕೋಟಿ ರೂ. ಹಣ ಖರ್ಚು ಮಾಡಿದ್ದಾರೆ. ಅದೇ ರೀತಿ ಒಟ್ಟು ಎರಡೇ ವರ್ಷದಲ್ಲಿ 8,986.00 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. Population double ಇರಬಹುದು ರಾಯರೆಡ್ಡಿಯವರೇ, ನಮ್ಮ ರಾಜ್ಯದ 15ನೇ ಸ್ಥಾನಕ್ಕೆ ಹೋಗಿ ಎಂದು

ಹೇಳುವರೇ? ತಮಿಳುನಾಡಿನಲ್ಲಿ 2013–14ರಲ್ಲಿ 4,690 ಕೋಟಿ ರೂಪಾಯಿಗಳು. ಅದೇ ರೀತಿ ಇವತ್ತು 2014–15 ಬಿಡಿ, ಒಟ್ಟು 5,425 ಕೋಟಿ ರೂಪಾಯಿಗಳನ್ನು ಜೂನ್ 30ಕ್ಕೆ ಖರ್ಚು ಮಾಡಿದ್ದಾರೆ. ನಮ್ಮ ಕರ್ನಾಟಕ ರಾಜ್ಯದ ಪ್ರಗತಿ ಏನೆಂದರೆ ಕೇವಲ 2013–14ರಲ್ಲಿ 1,500 ಕೋಟಿ ರೂ. ಅಂದರೆ ಸುಮಾರು 2,000 ಕೋಟಿ ರೂಪಾಯಿಗಳೆಂದು ಇಲ್ಲಿ figures ಕೊಟ್ಟಿರುವುದು. ನಮ್ಮ ರಾಜ್ಯ 15ನೇ ಸ್ಥಾನದಲ್ಲಿದೆ ಇದಕ್ಕೆ ಕಾರಣವೇನು? ಯಾವ ಉದ್ದೇಶ? ಇಂದಿನ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಬಗ್ಗೆ ನನಗೆ ಗೌರವವಿದೆ, ಈ ರಾಜ್ಯದಲ್ಲಿ ಕಾಳಜಿ ಇರುವಂಥ ಸಚಿವರು ಇದ್ದರೆ ಗ್ರಾಮೀಣಾಭಿವೃದ್ಧಿ ಸಚಿವರು ಎಂದು ಹೇಳಬೇಕಾಗುತ್ತದೆ. ಅವರು ಬಂದ ಮೇಲೆ .. ರಾಯರೆಡ್ಡಿಯವರು ಏನೋ ಮಾತನಾಡುತ್ತಿದ್ದಾರೆ,

ಶ್ರೀ ಬಸವರಾಜ ರಾಯರೆಡ್ಡಿ:– ಕುಮಾರಸ್ವಾಮಿಯವರದೆ same copy ನಿಮ್ಮ ಹತ್ತಿರ ಇದೆ. ಇಬ್ಬರಿಗೂ ಒಬ್ಬರೇ advisor ಇದ್ದಾರೆಯೇ?

ಶ್ರೀ ಹೆಚ್.ಡಿ. ರೇವಣ್ಣ:– ನಿನ್ನೆಯೇ ನಾನು ಗ್ರಾಮೀಣಾಭಿವೃದ್ಧಿ ಸಚಿವರ ಹತ್ತಿರ ಹೋಗಿ ಮಾತನಾಡಿದ್ದೇನೆ.

ಶ್ರೀ ಬಸವರಾಜ ರಾಯರೆಡ್ಡಿ:– ಇಬ್ಬರಿಗೂ ಒಬ್ಬರೇ advisor ಎಂದು ಕೇಳುತ್ತಿದ್ದೇನೆ.

ಉಪಾಧ್ಯಕ್ಷರು:– ರೇವಣ್ಣ, ನೀವು ಈ ಕಡೆ ಮಾತನಾಡಿ.

ಶ್ರೀ ಹೆಚ್.ಡಿ. ರೇವಣ್ಣ:– ಅದನ್ನು preamble ಆಗಿ ತೆಗೆದುಕೊಂಡು ಹೇಳುತ್ತಿದ್ದೇನೆ, ಸರ್. ಆ ವಿಷಯವಾಗಿಯೇ ಬರುತ್ತಿದ್ದೇನೆ. ನೀವು 14 ಪುಸ್ತಕಗಳನ್ನು ಮಾಡಿದ್ದೀರಿ. ಒಂದೊಂದು ಪುಸ್ತಕದ history ಹೇಳಬೇಕಾಗುತ್ತದೆ. ಇವತ್ತು ಉದಾಹರಣೆಗೆ "ನಮ್ಮ ಊರು ನಮ್ಮ ಕೆರೆ", ಇವತ್ತು 37000 ಕೆರೆಗಳಿವೆ, ಜಿಲ್ಲಾ ಪರಿಷತ್‌ನಲ್ಲಿ 37000 ಕೆರೆಯಲ್ಲಿ ಎಷ್ಟು ಅಭಿವೃದ್ಧಿ ಮಾಡಿರುವಿರಿ? ಇವತ್ತು ಕೆಲವು ಕಡೆ ತೂಬು ಇಲ್ಲ, ಯಾರೋ ಪುಣ್ಯಾತ್ಮರು ಕಟ್ಟಿರುವ ಕೆರೆಗಳಿವೆ. 37000 ಕೆರೆಗಳಲ್ಲಿ ಎಷ್ಟು ಕೆರೆಗಳನ್ನು ತೆಗೆದುಕೊಂಡಿದ್ದೀರಿ ಹೇಳಿ? ಬೇರೆ ರಾಜ್ಯದಲ್ಲಿ ಎಷ್ಟು ಕೆರೆಗಳನ್ನು

ತೆಗೆದುಕೊಂಡಿದ್ದಾರೆ ಹೇಳಿ. ಬೇರೆ ರಾಜ್ಯಕ್ಕೂ ಈ ರಾಜ್ಯಕ್ಕೂ ಹೋಲಿಸಿದರೆ ಇವತ್ತು ನರೇಗಾದಲ್ಲಿ ಎಷ್ಟು ಹಣ ಖರ್ಚು ಮಾಡಿದ್ದೀರಿ? ನಮ್ಮ ರಾಜ್ಯ ಏಕೆ ಇವತ್ತು 15ನೇ ಸ್ಥಾನಕ್ಕೆ ಹೋಗಿದೆ? ಪಕ್ಕದ ರಾಜ್ಯ 9,000 ಕೋಟಿ ರೂಪಾಯಿಗಳನ್ನು ಎರಡು ವರ್ಷಗಳಲ್ಲಿ ತೆಗೆದುಕೊಳ್ಳುತ್ತಾರೆ. ಈ ವರ್ಷ 2014–15 ರಲ್ಲಿ 4,000 ಕೋಟಿ ರೂಪಾಯಿಗಳನ್ನು ಜೂನ್‌ನಲ್ಲಿ ತೆಗೆದುಕೊಂಡಿದ್ದಾರೆ. ಕಾರಣವೇನೆಂದು ನಾನು ಕೇಳುವುದು. ಕಾರ್ಯಕ್ರಮವನ್ನು ರೂಪಿಸಲಿಕ್ಕೆ ಏನಾಗಿದೆ ನಮಗೆ? ಇವತ್ತು ಸಚಿವರು ಒಂದು ದಿಟ್ಟ ನಿಲುವನ್ನು ತೆಗೆದುಕೊಳ್ಳುವುದರಲ್ಲಿ ಇದ್ದಾರೆ. ಆದರೆ ಕೆಲವು ನ್ಯೂನತೆ ಸಹ ನರೇಗಾದಲ್ಲಿ ಇದೆ. ಕೆಲಸ ಮಾಡಬೇಕಾದರೆ ಕಾರ್ಯಕ್ರಮವನ್ನು ರೂಪಿಸುವುದು ದೊಡ್ಡದಲ್ಲ.

ಶ್ರೀ ಅಪ್ಪಾಜಿ ಸಿ.ಎಸ್. ನಾಡಗೌಡ:– ಕರ್ನಾಟಕ ಆಡಳಿತದಲ್ಲಿ ಬಹಳ ಪಾರದರ್ಶಕವಾಗಿ ಎಲ್ಲಾ ಕಾರ್ಯಕ್ರಮಗಳನ್ನು ಮಾಡುತ್ತೇವೆ. ನಾವು ಪೇಪರ್‌ನಲ್ಲಿ manipulations ಮಾಡುವುದಿಲ್ಲ, field ನಲ್ಲಿ manipulations ಮಾಡುವುದಿಲ್ಲ. ಇದು ನೀವೆಲ್ಲಾ ತಿಳಿದುಕೊಳ್ಳಬೇಕು, ಬೇರೆ ರಾಜ್ಯಗಳಲ್ಲಿ ವ್ಯಾಪಕವಾಗಿ ಮಾಡುತ್ತಿರುವುದು ಕಂಡುಬಂದಿದೆ. Karnataka is honest to that extent. ಅದಕ್ಕೆ ನೀವು ದಯವಿಟ್ಟು ಹೇಳುವಾಗ ಯಾವುದೇ ಕಾರಣಕ್ಕೂ ನಾವು ಹಿಂದೆ ಬಿದ್ದಿದ್ದೇವೆ. ಕರ್ನಾಟಕ ಸರಿಯಾಗಿ ಕಾರ್ಯಕ್ರಮವನ್ನು ಮಾಡಿಲ್ಲ ಎಂದು ಹೇಳಬೇಡಿ. ಅದು ಬೇರೆ ಬೇರೆ ಕಾರಣದಿಂದ ಪೇಪರ್ ಮೇಲೆ ಇರುವುದರಿಂದ ನೀವು ಹಾಗೆ ಹೇಳುವಿರಿ ಅಷ್ಟೆ.

ಶ್ರೀ ಹೆಚ್.ಡಿ. ರೇವಣ್ಣ:– ನೋಡಿ ಸ್ವಾಮಿ, ನನಗೆ ಪೇಪರ್ ಮೇಲೆ ಇರುವುದನ್ನು ಹೇಳುವುದಿಲ್ಲ. ಇಲ್ಲವೆಂದು ಮಂತ್ರಿಗಳು ಹೇಳಿದರೆ ನಾನು ಬೇಕಾದರೆ ಅದಕ್ಕೆ ಒಪ್ಪುತ್ತೇನೆ. ಹಾಗಾದರೆ ಆಂಧ್ರ ಪ್ರದೇಶದವರು ಲೂಟಿ ಮಾಡುತ್ತಿದ್ದಾರೆಯೇ? ತಮಿಳುನಾಡಿನವರು ಲೂಟಿ ಮಾಡುತ್ತಿದಾರೆಯೇ? ನೀವುಹೇಳೋಲೆಕ್ಕ ತೆಗೆದುಕೊಂಡರೆ ಹೇಗೆ?

ಶ್ರೀ ಬಸವರಾಜ ರಾಯರೆಡ್ಡಿ:– ನಾಡಗೌಡರು we are calculative, they are manipulative ಎಂದು ಹೇಳಿದ್ದು. There is a difference between calculative and manipulative. ನಾವು calculative ಇದ್ದೇವೆ. ಅವರು manipulative ಇದ್ದಾರಷ್ಟೆ.

ಶ್ರೀ ಉಮೇಶ್ ವಿ. ಕತ್ತಿ:– ಒಂದು ಕಡೆ toilet ಬರುತ್ತದೆ, ಒಂದು ಕಡೆ Honesty ಬರುತ್ತದೆ? ಯಾವುದಪ್ಪಾ ಅವು?

ಶ್ರೀ ಕೆ.ಎಂ. ಶಿವಲಿಂಗೇಗೌಡ:– ನಿಮ್ಮ ಕಾಲದಲ್ಲಿ ಅವು ಆಗಿದ್ದು.

ಶ್ರೀ ಉಮೇಶ್ ವಿ. ಕತ್ತಿ:– ನಿಮ್ಮ ಕಾಲ ಇರಲಿ, ನಮ್ಮ ಕಾಲ ಇರಲಿ, 18, 19 ಲಕ್ಷ toiletಗಳು ಕಳುವಾಗಿದೆ ಎಂದರೆ ಅದನ್ನು ಹುಡುಕುವ ಕೆಲಸವನ್ನಾದರೂ ಮಾಡಬೇಕಲ್ಲವೇ? ಯಾರಿದ್ದರೂ ಅವರನ್ನು punish ಮಾಡಿ, ನಾವು ಯಾರನ್ನೂ ನಿಲ್ಲಿಸುವುದಕ್ಕಾಗುವುದಿಲ್ಲ. ನಮ್ಮ ಕಾಲದಲ್ಲಿ ಆಗಿದ್ದರೂ punish ಮಾಡಿ ನಮಗೇನೂ ತೊಂದರೆಯಿಲ್ಲ, at least ಸದನ ಸಮಿತಿ ಮಾಡಿ ಆ toiletಗಳು ಎಲ್ಲಿ ಹೋದವು ಎಂದು ಹುಡುಕಿಸಿ.

ಶ್ರೀ ಅಪ್ಪಾಜಿ ಸಿ.ಎಸ್. ನಾಡಗೌಡ:– ಒಂದು ನಿಮಿಷ, ನೀವು ಎಲ್ಲಿಂದ ಎಲ್ಲಿಗೋ ಹೇಳುತ್ತಿದ್ದೀರಿ.

ಶ್ರೀ ಉಮೇಶ್ ವಿ. ಕತ್ತಿ:– ನಾನು Honesty ಬಗ್ಗೆ ಹೇಳಿದೆ. ಒಂದು ಕಡೆ 19 ಲಕ್ಷ toilet ಹೋಗಿದೆ.

ಶ್ರೀ ಅಪ್ಪಾಜಿ ಸಿ.ಎಸ್. ಮಾಡಗೌಡ:– ನಾವು ಇದಕ್ಕೆ ಸಂಬಂಧಪಟ್ಟ ಹಾಗೆ ಹೇಳುತ್ತಿದ್ದೇನೆ. ಕರ್ನಾಟಕ ಜನತೆ ಕರ್ನಾಟಕ ಸರ್ಕಾರದ ಇಲ್ಲೇ ಇರತಕ್ಕಂಥ ಅಧಿಕಾರಿಗಳು ಎಂಬ ಪದವನ್ನು ಉಪಯೋಗ ಮಾಡುತ್ತೇನೆ. ಈ ಸರ್ಕಾರ, ಹಿಂದಿನ ಸರ್ಕಾರ, ಅದರ ಹಿಂದಿನ ಸರ್ಕಾರವಿರಬಹುದು. ಅದನ್ನು ಒಂದು ದಿವಸದಲ್ಲೇ ಬದಲಾವಣೆ ಮಾಡಲಿಕ್ಕಾಗುವುದಿಲ್ಲ. ಆದರೆ ಬಂದಂತಹ ಪರಿಪಾಠ ಏನಿದೆ ಎಂದು ಹೇಳಿದ್ದೇನೆ. ಈ ಸರ್ಕಾರ ಎಂದು ಹೇಳಿಲ್ಲ. 11 ತಿಂಗಳುಗಳಲ್ಲಿ ನಾವು ಏನು ಮಾಡಿದ್ದೇವೆ ಏನು ಇಲ್ಲ ಎನ್ನುವಂತಹದ್ದಲ್ಲ.

ಈ ಪರಿಪಾಠ ಬಂದಿದೆ ಎನ್ನುವಂತಹದ್ದನ್ನು ನಾನು ಹೇಳುತ್ತಿದ್ದೇನೆ. Honesty ಗೆ ಹೆಚ್ಚು ಮಹತ್ವವನ್ನು ಕೊಡುತ್ತೇನೆ. ಎಲ್ಲೋ ಲೋಪದೋಷಗಳಾಗಿರಬಹುದು, ಆ ಲೋಪದೋಷಗಳಿಗೆ ತಿದ್ದುಪಡಿ ಹೇಗೆ ಮಾಡಬೇಕೆನ್ನುವುದನ್ನು ಮಾನ್ಯ ಬೊಮ್ಮಾಯಿಯವರು ಇಷ್ಟು ಹೊತ್ತಿನವರೆಗೆ ಮಾತನಾಡಿದ್ದಾರೆ. ಮಾನ್ಯ ರಾಯರೆಡ್ಡಿಯವರು ಬಹಳಷ್ಟು ಬೆಳಕು ಚೆಲ್ಲಿದ್ದಾರೆ. ಹಲವಾರು ಸದಸ್ಯರು ಮಾತನಾಡಿದ್ದಾರೆ. ಅದಕ್ಕೆ ಮಾನ್ಯ ಮಂತ್ರಿಯವರು ಉತ್ತರ ಕೊಡುವ ಸಂದರ್ಭದಲ್ಲಿ ಕೊಡುತ್ತಾರೆ. Why do you jump to conclusions?

ಉಪಾಧ್ಯಕ್ಷರು:- ಆಯಿತು ಮಾನ್ಯ ರೇವಣ್ಣನವರು ಮಾತನಾಡಿ. ಚರ್ಚೆ ಬೇಡ ಅವರು ಮಾತನಾಡಲಿ.

ಶ್ರೀ ಉಮೇಶ್ ವಿ. ಕತ್ತಿ:- ಅಲ್ಲ. ಆಂಧ್ರ ಮತ್ತು ತಮಿಳುನಾಡಿನವರು ಸರ್ಕಾರದ ಪಾಲುದಾರರಾಗಿದ್ದರು.

(ಗೊಂದಲ)

ಶ್ರೀ ಬಸವರಾಜ ರಾಯರೆಡ್ಡಿ:- ಕತ್ತಿಯವರೆ, ಒಂದು ನಿಮಿಷ ಕೇಳಪ್ಪ. ಒಂದು ನಿಮಿಷ ಕೇಳೋ ಮಾರಾಯ.

(ಗೊಂದಲ)

ಶ್ರೀ ಉಮೇಶ್ ವಿ. ಕತ್ತಿ:- ಹಾಗಾಗಿ ಅವರು ಸಮಯ ಜಾಸ್ತಿ ತೆಗೆದುಕೊಂಡರು. ಅವರು ಕೆಲಸ ಮಾಡುವುದಕ್ಕೆ ಆಗಿಲ್ಲ. ಅವರು ಯಾವ ನಾರ್ಮ್ಸ್ maintain ಮಾಡಿಲ್ಲ. ಹಾಗಾಗಿ ಅದನ್ನು ಒಪ್ಪಿಕೊಳ್ಳಿ. ಯಾರು ಮಾಡಿದ್ದೀರಿ ಅದನ್ನು...,. ಯಾರು ಮಾಡುವುದಕ್ಕಾಗಿಲ್ಲ ಅದನ್ನು ಹೇಳಿ.

ಶ್ರೀ ಕೆ.ಆರ್. ರಮೇಶ್ ಕುಮಾರ್:- ರೇವಣ್ಣನವರೆ, ನಾನು ಅಲ್ಲಿಂದ ಓಡಿ ಬಂದೆ. ಮಾನ್ಯ ರಾಯರೆಡ್ಡಿಯವರು ಏನೋ calculation, manipulation ಎಂದು ಹೇಳುತ್ತಿದ್ದರು. ಅದು ಏನಪ್ಪ? ಈಗ manipulation ಅಂದರೆ ಉಮೇಶ ಕತ್ತಿಯವರು, calculation ಎಂದರೆ ರಾಯರೆಡ್ಡಿಯವರು.

Because manipulation is not possible in Congress and calculation has no validity here. As simple as that.

ಉಪಾಧ್ಯಕ್ಷರು:– ಮಾತನಾಡಿ. ರೇವಣ್ಣನವರೆ, ಮುಂದುವರೆಸಿ. ಚರ್ಚೆ ಮುಗಿಯಬೇಕು.

ಶ್ರೀ ಬಸವರಾಜ ಬೊಮ್ಮಾಯಿ:– ನಾನು ಇದನ್ನು ಒಪ್ಪುವುದಿಲ್ಲ. ಏಕೆಂದರೆ, ಈ ಕಡೆ ಇದ್ದಂತಹ ಸಿದ್ದರಾಮಣ್ಣನವರು ಘಟಾನುಘಟಿಗಳ ನಡುವೆ ಅಲ್ಲಿ ಮುಖ್ಯಮಂತ್ರಿಗಳಾಗುತ್ತಾರೆ ಎಂದರೆ it cannot be calculation, it has to be manipulation only.

ಶ್ರೀ ಕೆ.ಆರ್. ರಮೇಶ್ ಕುಮಾರ್:– No. your failure to calculate Siddaramaiah, help these calculations here.

ಶ್ರೀ ಬಸವರಾಜ ಬೊಮ್ಮಾಯಿ:– It is a manipulative work. It cannot be through calculation, it has to be through manipulation only. ಅದು calculation ಆಗುವುದೇ ಇಲ್ಲ. ರಾಯರೆಡ್ಡಿಯವರದ್ದು calculation. ಅದನ್ನು ನಾನು ಒಪ್ಪುತ್ತೇನೆ. ಏಕೆಂದರೆ, ಪಾಪ ಅವರು ಅಲ್ಲಿದ್ದಾರೆ.

ಶ್ರೀ ಬಸವರಾಜ ರಾಯರೆಡ್ಡಿ:– ನಾನು correct ಆಗಿ calculate ಮಾಡಿಯೇ ಇಲ್ಲಿದ್ದೇನೆ.

ಶ್ರೀ ಕೆ. ಶಿವಮೂರ್ತಿ:– ಮಾನ್ಯ ಉಪಾಧ್ಯಕ್ಷರೆ, ಮಾನ್ಯ ರೇವಣ್ಣನವರು Accounts and Audit Committee ಗೆ ಅಧ್ಯಕ್ಷರು. ನಾನು ನಿಮ್ಮಲ್ಲಿ ನಿವೇದನೆ ಮಾಡಿಕೊಳ್ಳುತ್ತೇನೆ. When he speaks, audit and accounts ನಲ್ಲಿ ಜವಾಬ್ದಾರಿಯಿರುತ್ತದೆ. there is no word as such manipulation. ಇಲ್ಲಿ manipulation ಎನ್ನುವ ಪದ ರೆಕಾರ್ಡ್‌ಗೆ ಹೋಗಿದೆ. ನಾಳೆ ಬೇರೆ ರಾಜ್ಯದಲ್ಲಿ manipulate ಮಾಡುತ್ತಾರೆ ಎಂದು ಹೇಳುವ ಮಾತು ಸರಿಯಿಲ್ಲ.

ಶ್ರೀ ಬಸವರಾಜ ಬೊಮ್ಮಾಯಿ:– ಅದೇನು unparliamentary word ಅಲ್ಲ.

ಉಪಾಧ್ಯಕ್ಷರು:- ಅದೇನು unparliamentary word ಆಗುವುದಿಲ್ಲ.

ಶ್ರೀ ಕೆ. ಶಿವಮೂರ್ತಿ:- No. not un-parliamentary. It should not be.

(ಗೊಂದಲ)

ಶ್ರೀ ಕೆ.ಎಂ. ಶಿವಲಿಂಗೇಗೌಡ:- ಸದನದಲ್ಲಿ ನರೇಗಾ ಎಂದರೇನು, ನರೇಗಾದಲ್ಲಿ ಇವತ್ತು ವಿಚಿತ್ರವಾದಂತಹ ಸನ್ನಿವೇಶವಿದೆ? ನಾವು ಗ್ರಾಮೀಣ ಪ್ರದೇಶದಿಂದ ಬಂದಿರುವವರು. ನರೇಗಾ ಹೇಗೆ ನಡೆಯುತ್ತಿದೆ ಎಂಬುದು ನಮಗೆ ಗೊತ್ತಿದೆ. ನೀವು ಎಡೆಮಟ್ಟೆ ಎಳೆದು ಹಾಕಿದರೆ ಕಾಯಿ ಬರುವುದಿಲ್ಲ. ಯಾವ ಆಳಿಗೆ ನೀವು muster roll ಹಾಕುತ್ತೀರಲ್ಲಾ, ನಿಜವಾದವನನ್ನು ಯಾವನನ್ನಾದರೂ ಒಬ್ಬರನ್ನು ಅದರಲ್ಲಿ ಬರೆಯುತ್ತೀರಾ? ಇಲ್ಲಿ ಚರ್ಚೆ ಮಾಡಬಾರದು ಅಷ್ಟೆ. ದುಡ್ಡು ಬರಬೇಕು, ಒಳ್ಳೆಯ ಕೆಲಸವಾಗಬೇಕು ಅದನ್ನು ನೋಡಿ. ಗುಣಮಟ್ಟ ಕಾಪಾಡಿಕೊಳ್ಳಿ. Muster roll ನಲ್ಲಿಯೇ duplicate. ಕ್ಷೇತ್ರ ಕಟ್ಟಿರುವುದಕ್ಕೆ ನೀರು ಹಾಕುವುದಕ್ಕೆ ಯಾರೊಬ್ಬರೂ ಬರುವುದಿಲ್ಲ. ಗ್ರಾಮೀಣ ಪ್ರದೇಶದಲ್ಲಿ ಒಬ್ಬರೂ ಕಾರ್ಮಿಕರಿಲ್ಲ. ಎಲ್ಲಾ ಬೆಂಗಳೂರಿಗೆ ವಲಸೆ ಬಂದಿದ್ದಾರೆ. ಏತಕ್ಕೆ ಬಂದಿದ್ದಾರೆ? ಅಧಿಕಾರಿಗಳು ನರೇಗಾದಲ್ಲಿರತಕ್ಕಂತಹ ಕೆಲವು ಕಟ್ಟುಪಾಡುಗಳು, ನಿಯಮಗಳನ್ನು ಪಾಲಿಸುವುದಕ್ಕೆ ಸಾಧ್ಯತೆಯಿಲ್ಲ. ಅಲ್ಲಿ ಕಾರ್ಮಿಕರು ಕೆಲಸ ಮಾಡುವುದಕ್ಕಾಗುವುದಿಲ್ಲ. ಇವತ್ತು 194 ರೂಪಾಯಿಗಳಿಗೆ ಯಾರು ದುಡಿಯುತ್ತಾರೆ? ಗಾರೆ ಕೆಲಸಕ್ಕೆ ಹೋದರೆ ಇವತ್ತು 350-400 ರೂಪಾಯಿಗಳು ಕೊಡುತ್ತಾರೆ.

ಉಪಾಧ್ಯಕ್ಷರು:- ಮುಂದುವರೆಸಿ.

ಶ್ರೀ ಕೆ.ಎಂ. ಶಿವಲಿಂಗೇಗೌಡ:- ಮುಂದುವರೆಸುವುದಲ್ಲ. ಇದರ ಸತ್ಯಾಸತ್ಯತೆಯನ್ನು ಚರ್ಚೆ ಮಾಡುವುದನ್ನು ಬಿಟ್ಟು ಬೇರೆ ಚರ್ಚೆ ಮಾಡುವುದಕ್ಕಾಗುವುದಿಲ್ಲ. ಹೌದು ತಮಿಳುನಾಡಿನಲ್ಲಿ ನಿಜ. ಆಂಧ್ರ ಪ್ರದೇಶದಲ್ಲೂ ನಿಜ. ಆಂಧ್ರ ಪ್ರದೇಶದಲ್ಲಿ ನೀರಾವರಿ ಚಾನಲ್‌ಗೆ ಕಾಂಕ್ರೀಟ್ ಲೈನಿಂಗ್ ಮಾಡುತ್ತಾರೆ. ನಮ್ಮಲ್ಲಿ ಮಾಡುತ್ತೀರಾ? ನನ್ನ ವಿರುದ್ಧ ಸೋತವನು

ಆಗಲೇ ಅರ್ಜಿ ಬರೆಯುತ್ತಾನೆ. ಇವನು ಇದನ್ನೆಲ್ಲಾ ಮಾಡುತ್ತಿದ್ದಾನೆ, ಯಾವ್ಯಾವ constituency ವಿರುದ್ಧ ಅರ್ಜಿ ಬರೆಯುವುದಿಲ್ಲ? ಇವನ ಪಂಚಾಯಿತಿ ಅವನ ಕಡೆಯಿದ್ದರೆ apposite ಪಂಚಾಯಿತಿಯವನು ಎಲ್ಲೋ ಒಂದು ಅರ್ಜಿಯನ್ನು ತೆಗೆದುಕೊಂಡು ಹೋಗಿ ಗುಜರಾಯಿಸಿದ. ದಿವಸವೂ ಬಂದು ಆ ಲೋಕಾಯುಕ್ತದವರು ತನಿಖೆ ಮಾಡುತ್ತಲೇ ಇರುತ್ತಾರೆ. ಹೌದು ನಮ್ಮ ದ್ವೇಷ, ನಮ್ಮಲ್ಲಿರತಕ್ಕಂತಹ ಭಾವನೆಗಳು ಅದನ್ನೆಲ್ಲಾ ನಮ್ಮ ಕರ್ನಾಟಕದಲ್ಲಿ ಇನ್ನೂ ಮರೆತಿಲ್ಲ. ಆಂಧ್ರದಲ್ಲಿ ಅಭಿವೃದ್ಧಿಗೆ ಎಲ್ಲಾ ಒಂದಾಗುತ್ತಾರೆ. ದುಡ್ಡು ಹೊಡೆಯುತ್ತಾರೋ, ಹಾಗೆಯೇ ತೆಗೆದುಕೊಳ್ಳುತ್ತಾರೋ ಗೊತ್ತಿಲ್ಲ. ಕೆಲಸವಾಗುತ್ತವೆ. ಅಲ್ಲಿ ನೀರಾವರಿ ಲೈನಿಂಗ್ ಮಾಡುತ್ತಾರೆ. ನಮ್ಮಲ್ಲಿ ಮಾಡುತ್ತೀರಾ? ಊರಿನವರು ನಮ್ಮನ್ನು ಕಾಂಕ್ರೀಟ್ ಹಾಕುವುದಕ್ಕೆ ಬಿಡುತ್ತಾರಾ? ಕಾಂಕ್ರೀಟ್ ರಸ್ತೆ ಮಾಡೋಣವೆಂದರೆ ನಮ್ಮನ್ನು ಬಿಡುತ್ತಾರಾ? ಕಾಂಕ್ರೀಟ್ ಮಾಡೋಣ ಅದು ಒಳ್ಳೆಯ ಕೆಲಸ ಮಣ್ಣನ್ನು ಹಾಕಿದರೆ ಇರುವುದಿಲ್ಲ ನಾಳೆ ಬೆಳಗ್ಗೆ ಹೋಗುತ್ತದೆ ಎಂದರೆ ಬಿಡುತ್ತಾರಾ? ಕೆರೆ ಏರಿ ನೀರು ಹೊಡೆಯುವುದು, ಎಲ್ಲಾ ಜಲಾನಯನದಲ್ಲಿಯೂ ಹೂಳು ಎತ್ತುತ್ತಾರೆ. MI ನಲ್ಲೂ ಅದನ್ನೇ ಹೂಳು ಎತ್ತುತ್ತಾರೆ. ಜಿಲ್ಲಾ ಪಂಚಾಯಿತಿಯಲ್ಲೂ ಅದನ್ನೇ ಹೂಳು ಎತ್ತುತ್ತಾರೆ, ಬಿಲ್ ಮಾಡುತ್ತಾರೆ. ಎಲ್ಲಾ ನಮಗೆ ಗೊತ್ತಿಲ್ಲದು ಎಂದು ಹೇಳಿ ಸುಮ್ಮನೆ ನೀವು ಇಲ್ಲಿ ಕುಳಿತುಕೊಂಡು ದೊಡ್ಡ ದೊಡ್ಡ ಭಾಷಣ ಮಾಡಿಬಿಟ್ಟರೆ . . ?

ಶ್ರೀ ಹೆಚ್.ಡಿ. ರೇವಣ್ಣ:- ಮಾನ್ಯ ಉಪಾಧ್ಯಕ್ಷರೆ, ಈಗ ನಾಡಗೌಡರು ಬೇರೆ ರಾಜ್ಯದಲ್ಲಿ manipulate ಮಾಡುತ್ತಾರೆ ಎನ್ನುವ ಒಂದು ಮಾತು ಹೇಳಿದರು. ಉದಾಹರಣೆಗೆ ಹೇಳುವುದಾರೆ ಆಂಧ್ರ ಪ್ರದೇಶದಲ್ಲಿ 46%, ಮಧ್ಯ ಪ್ರದೇಶದಲ್ಲಿ 42%, ಮಹಾರಾಷ್ಟ್ರದಲ್ಲಿ 38%. ಇವತ್ತು ನಮ್ಮ ರಾಜ್ಯ 15% ರಲ್ಲಿ 8% ಇದೆ. ಹಾಗಾದರೆ ಆಂಧ್ರದಲ್ಲಿ manipulate ಮಾಡುತ್ತಾರಾ, ಮಧ್ಯ ಪ್ರದೇಶದಲ್ಲಿ manipulate ಮಾಡುತ್ತಾರಾ? ಮಹಾರಾಷ್ಟ್ರದಲ್ಲಿ manipulate ಮಾಡುತ್ತಾರಾ? ಆಮೇಲೆ ಛತ್ತೀಸ್‌ಘಡ್‌ನಲ್ಲಿ manipulate ಮಾಡುತ್ತಾರಾ? ನಾವು ಬೇರೆ ರಾಜ್ಯದ ಲೆಕ್ಕ ತೆಗೆದುಕೊಂಡರೆ ನಮ್ಮ ರಾಜ್ಯ 15ನೇ ಸ್ಥಾನದಲ್ಲಿದೆ

ಅದಕ್ಕೆ ಕಾರಣವೇನು ಎನ್ನುವ ಭಾವನೆಯನ್ನು ನಾನು ವ್ಯಕ್ತಪಡಿಸುತ್ತಿದ್ದೇನೆ. ಅದಕ್ಕೆ ನಾನು ಹೇಳುವುದು, ನಮ್ಮ ಗ್ರಾಮೀಣಾಭಿವೃದ್ಧಿ ಸಚಿವರು ಏಕೆಂದರೆ, ಅವರು powerful minister, ಅವರ ಬಗ್ಗೆ ನನಗೆ ಅಪಾರವಾದಂತಹ ಗೌರವವಿದೆ. ಏಕೆಂದರೆ, ಈ ರಾಜ್ಯದಲ್ಲಿ ಯಾರೇ ಮಂತ್ರಿಗಳಿರಲಿ, ನಾನು ಕೂಡ ಮಂತ್ರಿಯಾಗಿ 8 ವರ್ಷಗಳ ಕಾಲ ಕೆಲಸ ಮಾಡಿದ್ದೇನೆ. ಆದರೆ, ಈ ರಾಜ್ಯದಲ್ಲಿ ಬದ್ಧತೆಯಿಂದ ಕೆಲಸ ಮಾಡುವಂತಹ ಯಾರಾದರೂ ಮಂತ್ರಿಯಿದ್ದರೆ ಅದು ನಮ್ಮ ಗ್ರಾಮೀಣಾಭಿವೃದ್ಧಿ ಸಚಿವರು. ನೀವು 14 ಪುಸ್ತಕಗಳನ್ನು ಮಾಡಿ ಹಂಚಿದ್ದಿರಿ ಎಂದು ನನ್ನ ಭಾವನೆಯನ್ನು ವ್ಯಕ್ತಪಡಿಸುತ್ತಿದ್ದೇನೆಯೇ ವಿನಃ ಬೇರೆ ಏನಿಲ್ಲ. ಏಕೆಂದರೆ ವೈಯಕ್ತಿಕವಾಗಿ ಏನೂ ಇಲ್ಲ. ಬೇಕಾದರೆ ಯಾರಾದರೂ manipulate ಮಾಡಿಕೊಳ್ಳಲಿ. ನೀವೂ manipulate ಮಾಡಿ ನಾವು ಏನು ಬೇಡ ಎನ್ನುತ್ತೇವಾ? ನೀವು manipulate ಮಾಡಿ ಜನಕ್ಕೆ ಅನುಕೂಲ ಮಾಡಿ. ಅದನ್ನೇ ಶಿಲಿಂಗೇಗೌಡರಿಗೆ ಹೇಳಿದರೆ ಏನು ಹೇಳುತ್ತಾರೆ? ಮಾನ್ಯ ರಾಯರೆಡ್ಡಿಯವರಿಗೆ, ನಾಡಗೌಡರಿಗೆ ಯಾವ ರೀತಿ manipulate ಮಾಡುವುದು ಎನ್ನುವುದು ಗೊತ್ತಿದೆ, ಅದನ್ನು ನೀವು ಹೇಳಿಕೊಡಬೇಕು.

ಶ್ರೀ ಕೆ. ಶಿವಮೂರ್ತಿ:- Manipulate ಅನ್ನು ಕಂಡುಹಿಡಿಯುವುದಕ್ಕೆ ನೀವು audit and accounts committee ಅಧ್ಯಕ್ಷರಾಗಿರುವುದು. ನೀವು ವಿಚಾರ ಮಾಡಿ.

ಶ್ರೀ ಬಸವರಾಜ ರಾಯರೆಡ್ಡಿ:- ಮಾನ್ಯ ಮಂತ್ರಿಗಳೇ, . ..

ಉಪಾಧ್ಯಕ್ಷರು:- ನೀವು yield ಆಗಬೇಡಿ.

ಶ್ರೀ ಬಸವರಾಜ ರಾಯರೆಡ್ಡಿ:- ಮಾನ್ಯ ರೇವಣ್ಣನವರ ವಾದಕ್ಕೆ ನಾನು convince ಆಗಿಲ್ಲ. ಏಕೆ ಎಂದರೆ, ನಾನು ಓದಿದ ರಿಪೋರ್ಟ್ ಪ್ರಕಾರ last year ನಿಮಗೆ 2195 ಕೋಟಿ ರೂಪಾಯಿಗಳಿದೆ. ನೀವು ಖರ್ಚು ಮಾಡಿರುವುದು 2080-2090 ಕೋಟಿ ರೂಪಾಯಿಗಳು. ಅಲ್ಲಿಗೆ 99% ಖರ್ಚು ಮಾಡಿದ್ದಾರೆ. ಇದಕ್ಕೆ ಕಾರಣವೇನೆಂದರೆ, ಇವರು previous

years ನಲ್ಲಿ ಖರ್ಚು ಮಾಡಲಿಲ್ಲ. ಹಿಂದಿನ ಸರ್ಕಾರಗಳಲ್ಲಿ ಖರ್ಚು ಮಾಡಿಲ್ಲ. ಅದನ್ನು ಮಾನ್ಯ ಮಂತ್ರಿಗಳು ಹೇಳಿರಬೇಕಲ್ಲಾ? ಎಷ್ಟು ಹಣ ಕೊಟ್ಟಿದ್ದಾರೆ ಅದರಲ್ಲಿ 99% ಹಣ ಖರ್ಚು ಮಾಡಿದ್ದಾರೆ. ಕೆಲಸವಾಗಿಲ್ಲ ಆ ಮಾತು ಬೇರೆ. ನಾನು ನಿನ್ನೆ ಹೇಳಿದ್ದೆನಲ್ಲಾ, ಎಲ್ಲಾ ಕಾಂಟ್ರ್ಯಾಕ್ಟರ್ಸ್, ಆಫೀಸರ್‌ಗಳು ಮತ್ತು ರಾಜಕಾರಣಿಗಳ ಜೇಬಿಗಿಳಿದಿದೆ.

ಶ್ರೀ ಹೆಚ್.ಡಿ. ರೇವಣ್ಣ:– ಅವರು ಹೇಳಿದರು, ` 2192 ಕೋಟಿ ಕೊಟ್ಟಿದ್ದರು, ` 2090 ಕೋಟಿ ಖರ್ಚಾಗಿದೆ ಎಂದು ಹೇಳಿದರು. ನಾನು ಅದನ್ನು ಕೇಳುತ್ತಿಲ್ಲ. ಬೇರೆ ರಾಜ್ಯ ಅದರಲ್ಲೂ UPA government ಕೇಂದ್ರದಲ್ಲಿ ಇತ್ತು. UPA government ಇದ್ದು ಪಕ್ಕದ ರಾಜ್ಯಕ್ಕೆ 4000 ಕೋಟಿ ಕೊಡುತ್ತಾರೆ. ತಮಿಳುನಾಡಿಗೆ 4000 ಕೋಟಿ ಕೊಡುತ್ತಾರೆ. (ಗೊಂದಲ) ಸರ್, ದಯಮಾಡಿ ನೀವು yield ಆಗಬೇಕು. ನಾನು ಇಲ್ಲಿ ಮಾತನಾಡಬಾರದೇ? (ಗೊಂದಲ) ನಾನು ಬೇರೆ ತರಹ ಹೇಳುತ್ತಿಲ್ಲ. (ಗೊಂದಲ) ರಾಯರೆಡ್ಡಿಯವರು ಹಿರಿಯ ಸದಸ್ಯರಿದ್ದಾರೆ.

ಉಪಾಧ್ಯಕ್ಷರು:– ಕುಳಿತುಕೊಳ್ಳಿ.

ಶ್ರೀ ಬಸವರಾಜ ರಾಯರೆಡ್ಡಿ:– ಈ ವರ್ಷ ಏನು ಕೊಡುತ್ತಾರೆ ಹಣವನ್ನು ಅದರಲ್ಲಿ ಹೋದವರ್ಷ ಎಷ್ಟು ಖರ್ಚು ಮಾಡಿದ್ದೀರಿ ಎನ್ನುವುದರ ಮೇಲೆ ಕೊಡುತ್ತಾರೆ. Allocation is different from the previous expenditure.

ಶ್ರೀ ಹೆಚ್.ಡಿ. ರೇವಣ್ಣ:– ನೀವು ಹಿರಿಯ ಸದಸ್ಯರಿದ್ದೀರಿ. ನಿಮ್ಮಷ್ಟು ಅನುಭವವಿಲ್ಲ. ದಯಮಾಡಿ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಕೆ. ಶಿವಮೂರ್ತಿ:– ಮಾನ್ಯ ಅಧ್ಯಕ್ಷರೆ, ಈಗ ರೇವಣ್ಣನವರು Audit Accounts Committee ಅಧ್ಯಕ್ಷರು. Central Government ನಲ್ಲಿ. . .

ಉಪಾಧ್ಯಕ್ಷರು:– ಅದನ್ನು ಎಷ್ಟು ಸಲ ಹೇಳುತ್ತೀರಿ?

ಶ್ರೀ ಕೆ. ಶಿವಮೂರ್ತಿ:– 2G spectrum ಬಗ್ಗೆ Audit control ನವರು ವರದಿ ಕೊಟ್ಟಿದ್ದಾರೆ. ಅದನ್ನು manipulation ಎಂದು ಹೇಳಿ ಅದು ಏನೆಲ್ಲಾ ಆಗುತ್ತಿದೆ.

ಉಪಾಧ್ಯಕ್ಷರು:– ರೇವಣ್ಣನವರೆ, ನೀವು yield ಆಗಬೇಡಿ.

ಶ್ರೀ ಹೆಚ್.ಡಿ. ರೇವಣ್ಣ:– ಮಾನ್ಯ ಉಪಾಧ್ಯಕ್ಷರೆ, ಬೇರೆ ಉದ್ದೇಶವಿಲ್ಲ. ಖರ್ಚು ಮಾಡಿರುವುದು ಒಪ್ಪಿಕೊಳ್ಳುತ್ತೇನೆ. ಆದರೆ, ಇನ್ನೂ ಹೆಚ್ಚಿನ ಹಣ ತೆಗೆದುಕೊಳ್ಳಬಹುದಾಗಿತ್ತಲ್ಲಾ ಎನ್ನುವ ಭಾವನೆಯನ್ನು ವ್ಯಕ್ತಪಡಿಸುತ್ತಿದ್ದೇನೆ. ಬೇರೆ ರಾಜ್ಯದಲ್ಲಿ 4000 ಕೋಟಿ ಇದೆ. ಉದಾಹರಣೆಗೆ ಹೇಳುವುದಾದರೆ, ..

ಉಪಾಧ್ಯಕ್ಷರು:– ಈಗ 4 ಗಂಟೆಗೆ ಚರ್ಚೆ ಮುಗಿಯಬೇಕು. ರೇವಣ್ಣನವರೆ, ಬೇಗ ಮುಗಿಸಿ.

ಶ್ರೀ ಹೆಚ್.ಡಿ. ರೇವಣ್ಣ:– ಆಂಧ್ರ ಪ್ರದೇಶದವರು ಜೂನ್ ತಿಂಗಳಿನಲ್ಲಿ ಈ ವರ್ಷ 2014–15ನೇ ಸಾಲಿನಲ್ಲಿ 4000 ಕೋಟಿ ರೂಪಾಯಿಗಳನ್ನು ತೆಗೆದುಕೊಂಡಿರುತ್ತಾರೆ ಎಂದರೆ ನಮ್ಮಲ್ಲಿ ನಮ್ಮ ರಾಜ್ಯ ಕೇವಲ ` 439 ಕೋಟಿಗಳು. ಕಾರಣವೇನು? ಬೇರೆ ರಾಜ್ಯಕ್ಕೆ ಹೋಲಿಸಿದರೆ ನಮ್ಮ ರಾಜ್ಯದಲ್ಲಿ ಏತಕ್ಕೋಸ್ಕರ ಮಾಡುವುದಕ್ಕಾಗುತ್ತಿಲ್ಲವೆಂದು ನಾನು ಮಾನ್ಯ ಮಂತ್ರಿಗಳ ಗಮನಕ್ಕೆ ತರುತ್ತಿದ್ದೇನೆ. ಮಾಡಲಿ ಎಂದು ನಾನು ಹೇಳುವುದೇನೆಂದರೆ, ಇನ್ನೂ ಹೆಚ್ಚಿನ ರೀತಿಯಲ್ಲಿ ಮಾಡಿ ಉದಾಹರಣೆಗೆ ಅವರೇ ಮಾಹಿತಿ ಕೊಟ್ಟಿರುವ ಪ್ರಕಾರ ನಮ್ಮ ರಾಜ್ಯದಲ್ಲಿ 37 ಸಾವಿರ ಕೆರೆಗಳಿವೆ. ಅದರಲ್ಲಿ 33 ಸಾವಿರ ಜಿಲ್ಲಾ ಪಂಚಾಯತ್ ಕೆರೆಗಳು. ಆ 33 ಸಾವಿರ ಜಿಲ್ಲಾ ಪಂಚಾಯತ್ ಕೆರೆಗಳಲ್ಲಿ ಎಷ್ಟು ಕೆರೆಗಳನ್ನು ಅಭಿವೃದ್ಧಿ ಮಾಡಿದ್ದಾರೆ? ಏತಕ್ಕೋಸ್ಕರ ಅಭಿವೃದ್ಧಿ ಮಾಡುವುದಕಾಗಿಲ್ಲ? ಕಾರ್ಯಕ್ರಮ 2006ರಿಂದ ಪ್ರಾರಂಭವಾಗಿದೆ.; ಕಳೆದ 7 ವರ್ಷಗಳಲ್ಲಿ ಎಷ್ಟು ಕೆರೆಗಳನ್ನು ಪ್ರಾರಂಭ ಮಾಡಿದ್ದೀರಿ ಸ್ವಾಮಿ? ಅದೇ ರೀತಿ ಇವತ್ತು ಉದಾಹರಣೆಗೆ ಹೇಳುವುದು ಒಂದು ಕೆರೆ ಅಚ್ಚುಕಟ್ಟು ಪ್ರದೇಶವಿರಬಹುದು, ಈ ಕೆರೆ ಬಗ್ಗೆ ಬುಕ್‌ನಲ್ಲಿ ಕೊಟ್ಟಿರುವುದನ್ನು ನಾನು ಮಾತನಾಡುತ್ತೇನೆ. ಉದಾಹರಣೆಗೆ ಹೇಳುವುದಾದರೆ ಶಾಲಾ ಕಟ್ಟಡಗಳಿಗೆ

ಮುಂಚೆ ಕಾಂಪೌಂಡ್ ಹಾಕುವುದಕ್ಕೆ ಅವಕಾಶವಿತ್ತು. ಉದ್ಯೋಗ ಖಾತ್ರಿ ಯೋಜನೆಯಡಿ ಕಾಂಪೌಂಡ್ ಹಾಕುವುದಕ್ಕೆ ಅವಕಾಶವಿತ್ತು. ಆಗ ಯಾರೂ ಜಮೀನುಗಳನ್ನು ಒತ್ತುವರಿ ಮಾಡಿವುದಕ್ಕಾಗುತ್ತಿರಲಿಲ್ಲ. ಕೆಲವು ಶಾಲಾ ಕಾಂಪೌಂಡ್ ಮಾಡಿ ಒತ್ತುವರಿ ಮಾಡಿರುವಂತಹ ಉದಾಹರಣೆ ಇವತ್ತಿದೆ. ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಗಳು ಈ ರಾಜ್ಯದ ಗ್ರಾಮೀಣ ಪ್ರದೇಶಗಳಲ್ಲಿ ಕುಸಿದು ಹೋಗುತ್ತಿವೆ. ಸರ್ಕಾರ ಇದಕ್ಕೆ ಒತ್ತು ಕೊಡುತ್ತಿಲ್ಲ. ಗ್ರಾಮೀಣ ಪ್ರದೇಶದಲ್ಲಿನ ಮಕ್ಕಳ ಓದಬಾರದೆಂಬ ಭಾವನೆಯಿದೆ. ಸ್ವಚ್ಛತೆ ಕಾಪಾಡುವುದಕ್ಕೆ ಉದ್ಯೋಗ ಖಾತರಿಯಲ್ಲಿ ಹಿಂದೆ ಶಾಲೆಗಳಿಗೆ ಕಾಂಪೌಂಡ್ ಹಾಕುತ್ತಿದ್ದರು ಆದರೆ ಈ ಕಾರ್ಯಕ್ರಮವನ್ನು ಈಗ ಏಕೆ ನಿಲ್ಲಿಸಿದ್ದೀರಿ? ಆಟದ ಮೈದಾನ ಮಾಡಿ, ಕಾಂಪೌಂಡ್ ಮಾಡಿ ಸರ್ಕಾರಿ ಆಸ್ತಿಯನ್ನು ಉಳಿಸುವುದಕ್ಕೆ ಒಂದು ಅವಕಾಶವಿದೆ. ಮನೆಗೊಂದು ಶೌಚಾಲಯವೆಂಬ ಕಾರ್ಯಕ್ರಮ ಇವತ್ತು ಗ್ರಾಮಗಳಲ್ಲಿ ಇದ್ದು, 19 ಲಕ್ಷ ಶೌಚಾಲಯ ನಾಪತ್ತೆಯೆಂದು ಸುಮಾರು ಸದಸ್ಯರು ಮಾತನಾಡಿದ್ದಾರೆ. ಇದಕ್ಕೆ ಏನು ಮಾಡಬೇಕು? ಇದಕ್ಕೆ ಯಾವ ಅಧಿಕಾರಿಗಳು ಹೊಣೆ? ಪಂಚಾಯಿತಿ PDO ಗಳು ಹೊಣೆಯೇ, ಕಾರ್ಯದರ್ಶಿ ಹೊಣೆಯೇ ಅಥವಾ ಪಂಚಾಯಿತಿ ಅಧ್ಯಕ್ಷರು ಹೊಣೆಯೇ? ಇದಕ್ಕೆ ಯಾರು ಜವಾಬ್ದಾರರೆಂದು ತಾವು ಹೇಳಬೇಕಾಗುತ್ತದೆ. ಶೌಚಾಲಯ ನಿರ್ಮಾಣಕ್ಕೆ 10,000 ಕೋಟಿ ರೂಪಾಯಿಗಳನ್ನು ಕೇಂದ್ರ ಸರ್ಕಾರ ಕೊಟ್ಟಿದೆ. ಅದರಲ್ಲಿ ಸುಮಾರು ಮೂರು ಸಾವಿರ ಕೋಟಿ ರೂಪಾಯಿಗಳನ್ನು ಇನ್ನೂ ಖರ್ಚು ಮಾಡಿಲ್ಲ. ರೈತರ ಕಣ ಎಷ್ಟು ಉಪಯೋಗವಾಗಿದೆ? ಕೆಲವು ರೈತರಿಗೆ ಎಲ್ಲಿ ಕಣ ಬೇಕಾಗುತ್ತದೋ ಅಂತಹ ಕಡೆ ಕಣ ಮಾಡುವುದಿಲ್ಲ. ಎಲ್ಲಿ ಬೇಕಾಗಿಲ್ಲವೋ ಅಂತಹ ಕಡೆ ಕಣವನ್ನು ಮಾಡುತ್ತಾರೆ. ಯಾರದಾದರೂ ಮನೆಯಿದ್ದರೆ ಆ ಮನೆ ಬಳಿ ಕಣ ಮಾಡುವುದು, ಮಾನ್ಯ ಕಂದಾಯ ಸಚಿವರು ಇಲ್ಲೇ ಇದ್ದಾರೆ. ಗ್ರಾಮಗಳಲ್ಲಿ ಎಲ್ಲಿ ಸರ್ಕಾರಿ ಜಾಗವಿರುತ್ತದೋ ಅಂತಹ 4–5 ಜಾಗಗಳಲ್ಲಿ ಕಣ ಮಾಡುವುದಕ್ಕೆ reserve ಮಾಡಬೇಕು. Reserve ಮಾಡಿ ಕಣ ಮಾಡಿದಾಗ ಉಪಯೋಗವಾಗುತ್ತದೆ. ಉದಾಹರಣೆಗೆ ಹೇಳುವುದಾದರೆ ಗ್ರಾಮೀಣ ಪ್ರದೇಶದ ಜನ ಭತ್ತ ಬಡಿಯುವುದು ರಸ್ತೆಯಲ್ಲಿ

ಹಾಗೆ ನಮ್ಮ PWD road ನಲ್ಲಿಯೇ ಮಾಡುತ್ತಾರೆ. ನೀವು ಕಣ ಮಾಡಿದರೂ ಸಹ PWD road ನಲ್ಲಿ ಭತ್ತ ಬಡಿಯುತ್ತಿರುತ್ತಾರೆ. ಇದರಿಂದ ಎಷ್ಟು accident ಗಳಾಗುತ್ತವೆ, ಇದರಿಂದ ಜನಸಾಮಾನ್ಯರಿಗೆ ಎಷ್ಟು ತೊಂದರೆಯಾಗುತ್ತದೆ? ಈ ಬಗ್ಗೆ ಸರ್ಕಾರ ಗಮನಹರಿಸಬೇಕು. ಗ್ರಾಮ ಪಂಚಾಯಿತಿ ಲೆವೆಲ್‌ನಲ್ಲಿ ಕಣಗಳನ್ನು ಮಾಡಿದಾಗ ಒಂದು ಊರಿನಲ್ಲಿ 4–5 ಕಡೆ ಮಾಡುತ್ತಿರೋ ಮಾಡಿ. ನೀವು 14 ಕಾರ್ಯಕ್ರಮಗಳನ್ನು ರೂಪಿಸಿದ್ದೀರಿ ಸಂತೋಷ. ನಾವೇನು ಬೇಡವೆಂದು ಹೇಳುವುದಿಲ್ಲ. ರೈತರ ಗೃಹ ಅಭಿವೃದ್ಧಿ ಬಗ್ಗೆ ಹೇಳುವುದಾದರೆ, ಉದಾಹರಣೆಗೆ ಹೇಳಬೇಕೆಂದರೆ ತೋಟಗಾರಿಕೆ ಇಲಾಖೆ ಉದ್ಯೋಗ ಖಾತರಿಯಲ್ಲಿ ಕೆಲಸ ಕೊಡಬಹುದು. ಬಾಳೆಗಿಡ ಹಾಕುವುದಿರಬಹುದು, ಸಪೋಟ ಗಿಡ ಹಾಕುವುದಿರಬಹುದು ಇದು ಉದ್ಯೋಗ ಖಾತರಿ ಯೋಜನೆ ಕಾರ್ಯಕ್ರಮದಲ್ಲಿದೆ. Horticulture Department ಇದೆ ಅಥವಾ ಕೃಷಿ ಇಲಾಖೆ ಇದೆ ಒಂದೊಂದು ತಾಲ್ಲೂಕಿನಲ್ಲಿ ಉದ್ಯೋಗ ಖಾತರಿಯಲ್ಲಿ ಎಷ್ಟು ಎಕರೆಯಲ್ಲಿ ಬಾಳೆ ಬೆಳೆಸುವುದಕ್ಕೆ ಕ್ರಮ ಕೈಗೊಂಡಿದ್ದಾರೆ. 100 ಕ್ಕೆ 70 ಭಾಗ ತೋಟಗಾರಿಕೆ ಇಲಾಖೆಯಲ್ಲಿ ಹುದ್ದೆ ಖಾಲಿಯಿದೆ. ಇವರು ಕಾರ್ಯಕ್ರಮವನ್ನು ಹೇಗೆ ರೂಪಿಸುತ್ತೀರಿ? ಬೇರೆ ರಾಜ್ಯಗಳಲ್ಲಿ ಈ ಕಾರ್ಯಕ್ರಮಗಳನ್ನೆಲ್ಲಾ ರೂಪಿಸುವುದಕ್ಕೆ ಐದು ಸಾವಿರ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಆದರೆ ನಮ್ಮ ರಾಜ್ಯದಲ್ಲಿ ಹಣಕಾಸು ಇಲಾಖೆಯವರು ಏನು ಮಾಡಿದ್ದಾರೆ? ಅವರಿಗೇನಾದರೂ ನಾಚಿಕೆ ಮಾನ ಮರ್ಯಾದೆಯಿದ್ದರೆ ಅವರು ಯಾವುದಕ್ಕೆ ಬೇಕೋ ಅದಕ್ಕೆ ಒತ್ತು ಕೊಡುವುದಿಲ್ಲ. ನಾನು ಈ ರೀತಿ ಹೇಳುತ್ತಿದ್ದೇನೆಂದು ಬೇಸರಪಟ್ಟುಕೊಳ್ಳಬೇಡಿ ಈ ರಾಜ್ಯದಲ್ಲಿ ರೈತ ಬೆನ್ನೆಲುಬು ಕೃಷಿ ಮತ್ತು ತೋಟಗಾರಿಕೆಗೆ ಒತ್ತು ಕೊಡುತ್ತೇವೆಂದು ಹೇಳುತ್ತಾರೆ. ಇವತ್ತು ಕೃಷ್ಣ ಭೈರೇಗೌಡರಿಲ್ಲ. ಅವರ ಇಲಾಖೆಯಲ್ಲಿ ಎಷ್ಟು ಹುದ್ದೆ ಖಾಲಿಯಿದೆ, ಒಂದು ವರ್ಷಕ್ಕೆ ತೋಟಗಾರಿಕೆ ಮತ್ತು ಕೃಷಿ ಇಲಾಖೆಗೆ ಎಷ್ಟು ಖರ್ಚು ಮಾಡುತ್ತೀರಿ? ಒಂದು ವರ್ಷಕ್ಕೆ ಸುಮಾರು ಮೂರು ಸಾವಿರದಿಂದ ನಾಲ್ಕು ಸಾವಿರ ರೂಪಾಯಿಗಳವರೆಗೆ ಖರ್ಚು ಮಾಡುತ್ತೀರಿ. More than 70% ಹುದ್ದೆ ಖಾಲಿಯಿದೆ. ನಾಲ್ಕು ಕೃಷಿ ವಿಶ್ವವಿದ್ಯಾನಿಲಯಗಳಿಗೆ ಒಂದು ವರ್ಷಕ್ಕೆ

750 ಕೋಟಿ ರೂಪಾಯಿಗಳನ್ನು ಕೊಡುತ್ತೇವೆಂದು ಹೇಳುತ್ತೀರಿ. ಇದರಲ್ಲಿ 550 ಕೋಟಿ ರೂಪಾಯಿಗಳು ಕೇವಲ ಸಂಬಳಕ್ಕೆ ಹೋಗುತ್ತದೆ. ಉಳಿಕೆ 150 ಕೋಟಿ ರೂಪಾಯಿಗಳಲ್ಲಿ ಅವರು ಏನು ಮಾಡುತ್ತಾರೆ? ಹಿಂದೆ ರಾಗಿ ಬೆಳೆಯಿತ್ತು. ಇವತ್ತು ರಾಗಿ ಬೆಳೆಯುವವರಿಲ್ಲ.

ಉಪಾಧ್ಯಕ್ಷರು:– ನೀವು ಗ್ರಾಮೀಣಾಭಿವೃದ್ಧಿ ಇಲಾಖೆಯ ಬಗ್ಗೆ ಮಾತನಾಡಿ. ಕೃಷಿ ಇಲಾಖೆ ಬಗ್ಗೆ ಚರ್ಚೆ ಮುಗಿದಿದೆ.

ಶ್ರೀ ಹೆಚ್.ಡಿ. ರೇವಣ್ಣ:– ಮಾನ್ಯ ಉಪಾಧ್ಯಕ್ಷರೆ, ಸಪೋಟ ಗಿಡ ಮಾವಿನ ಗಿಡ ಬೆಳೆಯುವುದಕ್ಕೆ ಉದ್ಯೋಗ ಖಾತರಿಯಲ್ಲಿ ಅವಕಾಶವಿದೆಯೆಂದು ತೋಟಗಾರಿಕೆ ಬಗ್ಗೆ ಹೇಳುತ್ತಿದ್ದೇನೆ. ಒಂದೊಂದು ತಾಲ್ಲೂಕಿನಲ್ಲಿ 500 ರಿಂದ 1000 ಎಕರೆ ಜಮೀನನ್ನು ತೆಗೆದುಕೊಳ್ಳಬಹುದು. ಒಂದು plantation ತೆಗೆದುಕೊಂಡು ಮಾಡಿ ರೈತರುಗಳಿಗೆ ಪರಿಶಿಷ್ಟ ಸಮಾಜ ಇರಬಹುದು, ಹಿಂದುಳಿದ ವರ್ಗ ಇರಬಹುದು ಒತ್ತು ಕೊಡಬೇಕು. ಇದನ್ನು ಏಕೆ ಮಾಡುವುದಿಲ್ಲ? ಹಣಕಾಸು ಇಲಾಖೆ ಇವತ್ತು ಇಂತಹ ಕಾರ್ಯಕ್ರಮಗಳನ್ನು ರೂಪಿಸಬೇಕಾದರೆ ಕೇಂದ್ರ ಸರ್ಕಾರದ ಹಣವನ್ನು ಉಪಯೋಗಿಸಬೇಕಾದರೆ, ಈಗ ನರೇಗಾದಲ್ಲಿ ಹಣ ಬರುತ್ತದೆ. ಒಂದೊಂದು ತಾಲ್ಲೂಕಿನಲ್ಲಿ ತೋಟಗಾರಿಕೆ ಇಲಾಖೆಯಿಂದ minimum ಕನಿಷ್ಠ 20 ಕೋಟಿ, 30 ಕೋಟಿ, 40 ಕೋಟಿ ರೂಪಾಯಿಗಳನ್ನು ಮಾಡಬಹುದು. ಮಹಾರಾಷ್ಟ್ರ, ಮಧ್ಯ ಪ್ರದೇಶ ಇತ್ಯಾದಿ ಬೇರೆ ರಾಜ್ಯಗಳಲ್ಲಿ ಏನು ಮಾಡಿದ್ದಾರೆಂದು ಹೋಗಿ ದಯಮಾಡಿ ನೋಡಬೇಕು. ಮಾನ್ಯ ಮಂತ್ರಿಗಳಿಗೆ ಇದರ ಬಗ್ಗೆ ಕಾಳಜಿಯಿದೆ. ಇದನ್ನು ಗ್ರಾಮೀಣಾಭಿವೃದ್ಧಿ ಸಚಿವರು ಒಬ್ಬರೇ ಮಾಡುವುದಕ್ಕೆ ಸಾಧ್ಯವಿಲ್ಲ. ಮಾನ್ಯ ಮುಖ್ಯಮಂತ್ರಿಗಳಿರಬಹುದು, ಗ್ರಾಮೀಣಾಭಿವೃದ್ಧಿ ಸಚಿವರಿರಬಹುದು, ತೋಟಗಾರಿಕೆ ಸಚಿವರಿರಬಹುದು, ರೇಷ್ಮೆ ಇಲಾಖೆ ಸಚಿವರಿರಬಹುದು, ಉದ್ಯೋಗ ಖಾತರಿಯಲ್ಲಿ ಅಥವಾ ಇತರೆ ಯಾವ್ಯಾವ ಯೋಜನೆಗಳಿಗೆ ಇವತ್ತು ಕೇಂದ್ರ ಸರ್ಕಾರ ಹಣವನ್ನು ಮೀಸಲಿಟ್ಟಿದೆ ಆ ಉಪಯೋಗವನ್ನು ಪಡೆಯಬೇಕೆಂದು ಹೇಳುತ್ತೇನೆ. ಗ್ರಾಮೀಣಾಭಿವೃದ್ಧಿ ಸಚಿವರೊಬ್ಬರನ್ನೇ ನಾನು

ದೂರುವುದಕ್ಕಾಗುವುದಿಲ್ಲ. ಹಣಕಾಸು ಇಲಾಖೆಗೆ ತಾವು ಮಾರ್ಗದರ್ಶನ ಕೊಡಬೇಕು. ಏಕೆಂದರೆ ಕೂಡಲೇ ಮಂಜೂರಾತಿ ಕೋಡಬೇಕಾಗುತ್ತದೆ.

ಉದಾಹರಣೆಗೆ ಕುಡಿಯುವ ನೀರಿನ ಬಗ್ಗೆ ಹೇಳಬೇಕೆಂದರೆ, ನಮ್ಮ ರಾಜ್ಯದಲ್ಲಿ ಎಷ್ಟು ಹಳ್ಳಿಗಳಲ್ಲಿ ಕುಡಿಯುವ ನೀರಿನ ಸೌಲಭ್ಯವಿದೆ? ಕೆಲವು ಕಡೆ ಐದು ಹೋಬಳಿಗಳಲ್ಲಿ ಮೂರು ಹೋಬಳಿಯಲ್ಲಿ ನೀರಾವರಿ ಇಲ್ಲದಿರುವ ಪ್ರದೇಶಗಳಿವೆ. 1000, 1500 ಅಡಿ ಬೋರ್‌ಅನ್ನು ಕೊರೆದರೂ ನೀರು ಬರುವುದಿಲ್ಲ. ಕೆಲವು ಕಡೆ ಟ್ಯಾಂಕರ್‌ನಿಂದ ನೀರನ್ನು ಹೊಡೆಯುತ್ತಾರೆ. ಕೆಲವು ಕಡೆ ತೋಟದ ಮನೆಗಳಿಂದ ನೀರನ್ನು ಟ್ಯಾಂಕರ್ ಮೂಲಕ ತರುವ ಪರಿಸ್ಥಿತಿ ನಿರ್ಮಾಣವಾಗಿದೆ. ಬಸವರಾಜ ಬೊಮ್ಮಾಯಿರವರು ಮಾತನಾಡುತ್ತಿದ್ದರು. ಕೆರೆಗಳನ್ನು improve ಮಾಡಿದರೆ water table improve ಆಗುತ್ತದೆ. ನಿಮ್ಮಲ್ಲಿ 33,000 ಕೆರೆಗಳಿವೆ. 33,000 ಕೆರೆಗಳಲ್ಲಿ ಒಂದು ವರ್ಷಕ್ಕೆ ಎಷ್ಟು ಕೆರೆಗಳನ್ನು ಅಭಿವೃದ್ಧಿ ಮಾಡುವುದಕ್ಕೆ ಕ್ರಮ ಕೈಗೊಂಡಿದ್ದೀರಿ? ಬೇರೆ ರಾಜ್ಯಗಳಲ್ಲಿ ಎಷ್ಟು? ಅದನ್ನು ಕೂಡ ಉತ್ತರ ಕೊಡುವ ಸಂದರ್ಭದಲ್ಲಿ ತಿಳಿಸಬೇಕು. ಬೇರೆ ರಾಜ್ಯಗಳಲ್ಲಿ ಕೆರೆಗಳ ಅಭಿವೃದ್ಧಿ ಇರಬಹುದು, ತೋಟಗಾರಿಕೆ ಇರಬಹುದು ಯಾವ್ಯಾವ ಸ್ಕೀಮ್‌ನಲ್ಲಿ ಎಷ್ಟೆಷ್ಟು ತೆಗೆದುಕೊಂಡು ಕಾರ್ಯಕ್ರಮ ರೂಪಿಸುತ್ತಿದ್ದಾರೆ? ನಮ್ಮ ರಾಜ್ಯದಲ್ಲಿ ಏಕೆ ಮಾಡುವುದಕ್ಕೆ ಆಗಿಲ್ಲ? ಇದಕ್ಕೆ ಕಾರಣವೇನು ಎಂಬುದನ್ನು ತಾವು ಹೇಳಬೇಕಾಗುತ್ತದೆ. ಉದಾಹರಣೆಗೆ ತಾಲ್ಲೂಕು ಪಂಚಾಯಿತಿ ಸಮಿತಿಗೆ ಒಂದು ಕೋಟಿ ರೂಪಾಯಿಗಳ grant 13ನೇ ಹಣಕಾಸಿನಲ್ಲಿ ಕೊಡುತ್ತೀರಿ. ಅದರಲ್ಲಿ 18% SC/ST ಗೆ ಹೋಗುತ್ತದೆ, ಮೂರು ಲಕ್ಷ ರೂಪಾಯಿಗಳನ್ನು ಅಂಗವಿಕಲರಿಗೆ ಸೈಕಲ್ ತೆಗೆದುಕೊಳ್ಳುವುದಕ್ಕೆಂದು ಕೊಡುತ್ತೀರಿ. 23 ಲಕ್ಷ ರೂಪಾಯಿಗಳು ಹೋದರೆ 72 ಲಕ್ಷ ರೂಪಾಯಿಗಳು ಉಳಿಯುತ್ತದೆ. ಅದರಲ್ಲಿ 90% building ಮಾಡಬೇಕೆಂದು ಹೇಳುತ್ತೀರಿ. ಅದರಲ್ಲಿ road ಗೆ ಕೊಡುವುದು 10%. ಆ ಪಂಚಾಯಿತಿಯಲ್ಲಿ 15 ಜನ ಸದಸ್ಯರಿರುತ್ತಾರೆ. 10% ಎಂದರೆ ಎಷ್ಟು ಬರುತ್ತದೆ? 20 ಜನ ಸದಸ್ಯರಿದ್ದರೆ 5,000 ರೂಪಾಯಿಗಳು ಬರುತ್ತದೆ. 20%, 25% ಅಥವಾ 30% ಇಡಿ. ಏನು ತೊಂದರೆ? ಸ್ಕೂಲ್ ಮತ್ತು

ಅಂಗನವಾಡಿಗಳನ್ನೇ ತೆಗೆದುಕೊಳ್ಳಬೇಕೆಂದು ಅದರಲ್ಲಿ ಮಾನದಂಡ ಹಾಕಿದ್ದಾರೆ. ಶಿಕ್ಷಣ ಇಲಾಖೆಯಿಂದಲೇ ದುಡ್ಡು ಕೊಡುತ್ತಾರೆ. 13ನೇ ಹಣಕಾಸಿನಿಂದ ಕೊಡುತ್ತಾರೆ. ತಾಲ್ಲೂಕು ಪಂಚಾಯತ್ ಸಮಿತಿ ನಿಧಿ ಎಂದು ಒಂದು ಕೋಟಿ ರೂಪಾಯಿಗಳು ಬರುತ್ತದೆ. ಅದರಲ್ಲಿ 100 ಕ್ಕೆ 90 ಭಾಗ building ತೆಗೆದುಕೊಳ್ಳಬೇಕು. ಅಂಗನವಾಡಿ ಮತ್ತು ಶಾಲಾ ಕಟ್ಟಡ ಬಿಟ್ಟರೆ ಇನ್ನೇನಿಲ್ಲ. ತಾಲ್ಲೂಕು ಪಂಚಾಯಿತಿ ಸಮಿತಿ ಸದಸ್ಯರಾಗಿದ್ದೇವೆ ಏನು ಮಾಡುವುದೆಂದು ಆ ಸದಸ್ಯರು ಬಂದು ನಮ್ಮ ಬಳಿ ಬಾಯಿ ಬಡಿದುಕೊಳ್ಳುತ್ತಾರೆ. ಒಂದೊಂದು ತಾಲ್ಲೂಕು ಪಂಚಾಯಿತಿ ಸದಸ್ಯರಾಗಬೇಕಾದರೆ ಕನಿಷ್ಠ 20 ರಿಂದ 25 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಬೇಕು. ಕೆಲವು ಕಡೆ ಅಂದರೆ ದತ್ತಾ, ಬೋಪಯ್ಯರವರ ಕ್ಷೇತ್ರಗಳಲ್ಲಿ ಕಡಿಮೆ ಇರಬಹುದು ಗೊತ್ತಿಲ್ಲ. ಬೇರೆ ಕಡೆ ಕನಿಷ್ಠ 20 ರಿಂದ 25 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಬೇಕು. ಅಷ್ಟು ಖರ್ಚು ಮಾಡಿ ಅಲ್ಲಿ 5,000, 2,000 ರೂಪಾಯಿಗಳನ್ನು ಪಡೆಯಬೇಕು.

ಶ್ರೀ ಪಿ.ಎಂ. ನರೇಂದ್ರಸ್ವಾಮಿ:- ರೇವಣ್ಣನವರೆ, ನೀವೇ costly ಆಗಿರುವುದು. ಯಾವ ಸದಸ್ಯರೂ ಕೂಡ ಒಂದು ತಾಲ್ಲೂಕು ಪಂಚಾಯಿತಿಗೆ 25 ಲಕ್ಷ ರೂಪಾಯಿಗಳೆಂದು ಹೇಳಿಲ್ಲ. ನೀವೇ costliest.

ಶ್ರೀ ಹೆಚ್.ಡಿ. ರೇವಣ್ಣ:- ನಾವಲ್ಲ, ನೀವೇ costly ಆಗಿರುವುದು. ಐದು ವರ್ಷ ಅಲ್ಲೇ ಇದ್ರಿ. ಆ ರೇಟ್ ನಿಮಗೆ ಗೊತ್ತು. ನನಗೆ ರೇಟ್ ಗೊತ್ತಿಲ್ಲ. ಈಗ ನಡೆಯುವುದನ್ನು ಹೇಳುತ್ತಿದ್ದೇನೆ. ಇದೆಲ್ಲಾ ನನಗ್ಯಾಕೆ? ನಮ್ಮ ನೆಲ, ನಮ್ಮ ದಾರಿ ಮಾಡಬೇಕೆಂದು ಹೇಳುತ್ತೀರಿ.

ಉಪಾಧ್ಯಕ್ಷರು:- ರೇವಣ್ಣನವರೆ, conclude ಮಾಡಿ

ಶ್ರೀ ಹೆಚ್.ಡಿ. ರೇವಣ್ಣ:- ಮಾನ್ಯ ಅಧ್ಯಕ್ಷರೆ, ಇನ್ನೂ ವಿಷಯವಿದೆ ಬೇರೆಯವರಿಗಾದರೆ ಒಂದೂವರೆ ಎರಡು ಗಂಟೆ ಕಾಲಾವಕಾಶ ಕೊಡುತ್ತೀರಿ ನಮಗೆ ಇಲ್ಲವೆಂದು ಹೇಳುತ್ತೀರಿ. ಮಾತನಾಡುವುದು ಬೇಡವೆಂದರೆ ಸುಮ್ಮನೆ ಕುಳಿತುಕೊಳ್ಳುತ್ತೇನೆ.

ಉಪಾಧ್ಯಕ್ಷರು:- ನೀವು ಅರ್ಧ ಗಂಟೆ ಮಾತನಾಡಿದ್ದೀರಿ. ಇನ್ನೂ ಉತ್ತರ ಕೊಡಬೇಕು. ಬೇಗ conclude ಮಾಡಿ. ಬೇರೆ ವಿಚಾರಗಳ ಮೇಲೆ ಮಾತನಾಡಿ.

ಶ್ರೀ ಹೆಚ್.ಡಿ. ರೇವಣ್ಣ:- ಮಾನ್ಯ ಪಂಚಾಯತ್ ಲೆವೆಲ್‌ನಲ್ಲಿ ಇವತ್ತು ಅವ್ಯವಹಾರ ನಡೆಯುತ್ತಿದೆ. ಅದಕ್ಕೆ ಒಬ್ಬ ಅಧಿಕಾರಿಯನ್ನು ಜಿಲ್ಲಾ ಮಟ್ಟಕ್ಕೆ ಹಾಕಿದ್ದೀರಿ. ಅವರನ್ನು ಹಾಕುವಾಗ retired employees ಅನ್ನು ಹಾಕಬೇಡಿ ಎಂದು ಬಸವರಾಜ ಬೊಮ್ಮಾಯಿರವರು ಹೇಳಿದರು. ನೀವು ಅವರ ಮೇಲೆ ಭ್ರಷ್ಟಾಚಾರ ಇರುವವರನ್ನೇ ಹಾಕಿದ್ದೀರಿ. ಮಾನ್ಯ ಉಪಾಧ್ಯಕ್ಷರೆ, ಪ್ರಮಾಣಿಕರಾದ ಅಧಿಕಾರಿಗಳನ್ನು ಹಾಕಿ ಹೊರತು ಕಳ್ಳಕಾಕರನ್ನು ಹಾಕುವುದಕ್ಕೆ ಹೋಗಬೇಡಿ. ಬೇಕಾದರೆ ಅವರ history ಯನ್ನು ತೆಗೆದುಕೊಳ್ಳಿ. ಅವರ history ಯಲ್ಲಿ ಅವರ ಬಗ್ಗೆ ಏನಾದರೂ ಒಳ್ಳೆಯ ಅಭಿಪ್ರಾಯವಿದ್ದರೆ ಹಾಕಿ ನಾವು ಬೇಡ ಎನ್ನುವುದಿಲ್ಲ. ಕೆಲವು ಭ್ರಷ್ಟರು ಯಾರಿರುತ್ತಾರೆ ಅವರನ್ನು ಹಾಕಬೇಡಿಯೆಂದು ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರಲ್ಲಿ ಮನವಿ ಮಾಡುತ್ತಿದ್ದಾನೆ. ಗ್ರಾಮ ಪಂಚಾಯಿತಿಗೆ 10 ಲಕ್ಷ ರೂ.ಗಳನ್ನು ಮಾತ್ರವಲ್ಲ ಒಂದು ಗ್ರಾಮ ಪಂಚಾಯಿತಿಗೆ ಉದ್ಯೋಗ ಖಾತ್ರಿ ಯೋಜನೆಯಡಿಯಲ್ಲಿ ಕನಿಷ್ಠ 2 ಕೋಟಿ ರೂ.ಗಳನ್ನು ಖರ್ಚು ಮಾಡಬೇಕೆಂದು ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯದರ್ಶಿಯವರಿಗೆ ಹೇಳಿ. PDO post ಇದೆ, ಕಾರ್ಯದರ್ಶಿಗಳ post ಇದೆ. ಪಂಚಾಯಿತಿಯಲ್ಲಿ ಕನಿಷ್ಠ 2 ಕೋಟಿ ರೂ.ಗಳ ಕಾರ್ಯಕ್ರಮವನ್ನು ಮಾಡುವುದಕ್ಕೆ ಆಗಿರುವ ತೊಂದರೆ ಏನು? ನಾನು ಗ್ರಾಮೀಣಾಭಿವೃದ್ಧಿ ಸಚಿವರಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ, ಪಂಚಾಯಿತಿಯಲ್ಲಿ PDO ಗಳಿಗೆ 8 ರಿಂದ 10 ಹಳ್ಳಿ ಇರುತ್ತವೆ. ಆ 10 ಹಳ್ಳಿಗಳಿಗೆ PDO ಗಳು ಒಂದು ದಿವಸ ಭೇಟಿ ಮಾಡಿ ಯಾವ ಹಳ್ಳಿಯಲ್ಲಿ ರಸ್ತೆ ಇಲ್ಲ, ಎಲ್ಲಿ electrification ಇಲ್ಲ ಎನ್ನುವುದನ್ನು ಗಮನಿಸಬೇಕು. ಕೆಲವರು ರಸ್ತೆಗಳಲ್ಲಿ ಕಂಬಗಳನ್ನು ನೆಡುತ್ತಾರೆ. ಆದರೂ ಪಂಚಾಯಿತಿ PDO ಗಳು ಸುಮ್ಮನೆ ಕುಳಿತುಕೊಂಡಿರುತ್ತಾರೆ. ನಾವೇನಾದರೂ ಅದರ ಬಗ್ಗೆ ಅರ್ಜಿ ಬರೆಯುವುದಕ್ಕೆ ಹೋದರೆ ನಮ್ಮನ್ನು ಬೈದುಕೊಳ್ಳುತ್ತಾರೆ. ಆ ಪರಿಸ್ಥಿತಿ

ಇದೆ. ಪಂಚಾಯಿತಿ PDO ಗಳಿಗೆ ಕನಿಷ್ಠ 2 ಕೋಟಿ ರೂ.ಗಳನ್ನು ಪಂಚಾಯಿತಿಯ ನಿರ್ದಿಷ್ಟ ಕಾರ್ಯಕ್ರಮಗಳಿಗೆ ಖರ್ಚು ಮಾಡಬೇಕೆಂದು ಹೇಳಬೇಕು. ಏಕೆಂದರೆ ಆ ಹಣ ಕೇಂದ್ರ ಸರ್ಕಾರದಿಂದ ಕೊಡುವ ಹಣವಾಗಿದೆ. ಆ ಹಣವನ್ನು ಉಪಯೋಗ ಮಾಡಿಕೊಳ್ಳಿ. ಎಲ್ಲಾ ಇಲಾಖೆಗಳು ಒಂದು ಪಂಚಾಯಿತಿಗೆ ಕನಿಷ್ಠ 2 ಕೋಟಿ ರೂ.ಗಳನ್ನು ನರೇಗಾ ಯೋಜನೆಯಲ್ಲಿ ಖರ್ಚು ಮಾಡಬೇಕೆಂದು ಮನವಿ ಮಾಡುತ್ತೇನೆ. ಮತ್ತೆ ತಾಲ್ಲೂಕು ಪಂಚಾಯಿತಿ ಸಮಿತಿ ಬಗ್ಗೆ ಹೇಳುವುದಾದರೆ, 13ನೇ ಹಣಕಾಸು ಹಾಗೂ ಬಾಕಿ ಎಲ್ಲಾ ಸೇರಿ ಒಂದು ಪಂಚಾಯಿತಿಗೆ 2 ಕೋಟಿ ರೂ.ಗಳನ್ನು ಕೊಡುತ್ತಿದ್ದೀರಿ. ತಾಲ್ಲೂಕು ಪಂಚಾಯಿತಿ ಸಮಿತಿಗೆ ಕನಿಷ್ಠ 5 ಕೋಟಿ ರೂ.ಗಳನ್ನು ಕೊಡುವುದು ಸೂಕ್ತವೆನ್ನುವುದು ನನ್ನ ಭಾವನೆ. ಅದು ಕೊಟ್ಟಾಗ ಮಾತ್ರ ಗ್ರಾಮೀಣ ಮಟ್ಟದಲ್ಲಿರಬಹುದು, ತಾಲ್ಲೂಕು ಮಟ್ಟದಲ್ಲಿರಬಹುದು ಪಂಚಾಯಿತಿ, ತಾಲ್ಲೂಕು ಅಧ್ಯಕ್ಷರಿಗೆ ಅನುಕೂಲವಾಗುತ್ತದೆ. ಇಂದಿರಾ ಆವಾಸ್ ಇರಬಹುದು ಹೀಗೆ ಕೇಂದ್ರ ಸರ್ಕಾರದ ಹಲವಾರು ಯೋಜನೆಗಳಿವೆ. ಕೇಂದ್ರ ಸರ್ಕಾರದ ಗ್ರಾಮೀಣಾಭಿವೃದ್ಧಿಯಲ್ಲಿ ಸುಮಾರು 261 ಯೋಜನೆಗಳಿವೆ ಎಂದು ತಾವು ಹೇಳುತ್ತೀರಿ. ಆ ಯೋಜನೆಗಳನ್ನು ಉಪಯೋಗ ಮಾಡಿಕೊಳ್ಳಲು ಅವಕಾಶ ಮಾಡಿಕೊಡಿ. ಗ್ರಾಮೀಣಾಭಿವೃದ್ಧಿ ಸಚಿವರು ಈ ರಾಜ್ಯದಲ್ಲಿ ಉತ್ತಮವಾದಂಥ ಒಳ್ಳೆಯ ಒಬ್ಬ ಅನುಭವಿ ಸಚಿವರಾಗಿದ್ದಾರೆ. ದಯಮಾಡಿ ಕುಡಿಯುವ ನೀರಿಗೆ ಪ್ರಾಮುಖ್ಯತೆ ಕೊಡಿಯೆಂದು ಅವರಲ್ಲಿ ವಿನಂತಿ ಮಾಡುತ್ತೇನೆ. ಕೇಂದ್ರ ಸರ್ಕಾರದಿಂದ ಬರುವ ಹಣವನ್ನು ಉಪಯೋಗ ಮಾಡಿಕೊಳ್ಳಿ. ಇವತ್ತು ಕೆರೆಗಳ ಮೂಲಕ ಅಥವಾ ನೀರಾವರಿ ಮೂಲಕ, ನಾಲೆ, ಹೊಳೆಗಳ ಮುಖಾಂತರ ಹೀಗೆ ಯಾವುದರಲ್ಲಿ ಹಣ ಬರುತ್ತದೆ ಆ ಹಣದ ಉಪಯೋಗ ಪಡೆದುಕೊಳ್ಳಬೇಕು. ತಮಿಳುನಾಡಿನಲ್ಲಿ ಕಾವೇರಿ ಅಚ್ಚುಕಟ್ಟು ಪ್ರದೇಶದಲ್ಲಿ ಕೆಲವು ಜಿಲ್ಲೆಗಳಲ್ಲಿ 100% ಬಹು ಕುಡಿಯುವ ನೀರಿನ ಯೋಜನೆಯನ್ನು ಕಾವೇರಿ ಯೋಜನೆಗಳಿಂದ ಬಳಸಿಕೊಂಡಿದ್ದಾರೆ. ಬೇಕಾದರೆ ಅದನ್ನು ತರಿಸಿ ನೋಡಿ. ಅದೇ ರೀತಿ ಕಾವೇರಿ ಬೇಸಿನ್ ಇರಬಹುದು, ಕೃಷ್ಣ ಬೇಸಿನ ಇರಬಹುದು ಅಚ್ಚುಕಟ್ಟು ಪ್ರದೇಶದಲ್ಲಿ ಇವತ್ತು

ಕುಡಿಯುವ ನೀರಿನ ವ್ಯವಸ್ಥೆಗೆ ಪ್ರಾಮುಖ್ಯತೆಯನ್ನು ಕೊಡಬೇಕೆಂದು ಮನವಿ ಮಾಡುತ್ತೇನೆ. ಕೆಲವು ಕಾನೂನಿನ ತೊಡಕುಗಳಿದ್ದರೆ ಅವುಗಳನ್ನು ನಿವಾರಿಸಿ ಕೇಂದ್ರದಿಂದ ಬರುವ ಹಣವನ್ನು ಉಪಯೋಗ ಮಾಡಿಕೊಳ್ಳಿ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕೆ. ಗೋಪಾಲ ಪೂಜಾರಿ (ಬೈಂದೂರು):– ಮಾನ್ಯ ಉಪಾಧ್ಯಕ್ಷರೆ, ಗ್ರಾಮೀಣಾಭಿವೃದ್ಧಿ ಇಲಾಖೆಯ ಮೇಲೆ ಚರ್ಚೆಗೆ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ಅಭಿನಂದನೆಯನ್ನು ಸಲ್ಲಿಸಿ, ಗ್ರಾಮ ಪಂಚಾಯಿತಿ, ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಈ ರೀತಿಯ Three-Ti system ಏನಿದೆ ಅದರಲ್ಲಿ ವಿಶೇಷವಾಗಿ ಇವತ್ತು ಗ್ರಾಮ ಪಂಚಾಯಿತಿಯ ವ್ಯವಸ್ಥೆಯಲ್ಲಿ ಆರ್ಥಿಕ ಬಿಕ್ಕಟ್ಟನ್ನು ನಾವು ಕಾಣುತ್ತಿದ್ದೇವೆ. ಗ್ರಾಮ ಪಂಚಾಯಿತಿಗೆ ಶಾಸನಬದ್ಧವಾದ ಅನುದಾನವನ್ನು 4 ಕಂತುಗಳಲ್ಲಿ ಕೊಡುಲಾಗುತ್ತಿದೆ. ಅದನ್ನು ಕಾಲ ಕಾಲಕ್ಕೆ ಕೊಡಬೇಕೆಂದು ನಾನು ಒತ್ತಾಯ ಮಾಡಲಿಕ್ಕೆ ಇಚ್ಛೆ ಪಡುತ್ತೇನೆ. ಬಹುಶಃ ಗ್ರಾಮ ಸಭೆಗೆ ಜನರು ಬರುವುದು ಬಹಳ ಕಡಿಮೆಯಾಗುತ್ತಿದೆ. ಸರ್ಕಾರದ ಒಂದು ನೀತಿ ಏನಿದೆ ಅದರಲ್ಲಿ ಗ್ರಾಮ ಸಭೆ ಕಡ್ಡಾಯವಾಗಿದೆ. ವಸತಿ ಯೋಜನೆ ನಿರ್ಣಯ ಬಿಟ್ಟರೆ ಬೇರೆ ಮಹತ್ವಕ್ಕಾಗಿ ಜನರ ಸಹಭಾಗಿತ್ವ, ನಂಬಿಕೆ, ವಿಶ್ವಾಸ ಕಡಿಮೆಯಾಗುತ್ತಿದೆ. ಜನರಿಗೆ ಅದರಲ್ಲಿ ವಿಶ್ವಾಸ ಹೆಚ್ಚುವ ರೀತಿಯಲ್ಲಿ ತಾವು ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ. ಗ್ರಾಮ ಪಂಚಾಯಿತಿಗೆ ಅನೇಕ work load ಇದೆ. ಅದರಲ್ಲಿ ಗ್ರಾಮ ನೈರ್ಮಲ್ಯ ಇರಬಹುದು, ಆರೋಗ್ಯ ಇರಬಹುದು, ಕುಡಿಯುವ ನೀರು ಇರಬಹುದು, ಪಡಿತರ ಅರ್ಜಿ ಕೊಡತಕ್ಕಂಥದ್ದು ಇರಬಹುದು. ಗಣಕ ಯಂತ್ರ ನಿರ್ವಾಹಕ ನೇಮಕಾತಿ, ಸಿಬ್ಬಂದಿ ನೇಮಕಾತಿ, ವಿದ್ಯುತ್ ಬಿಲ್ ಕಟ್ಟುವುದಕ್ಕೆ ಅನುದಾನ ಹಾಗೂ ಸಿಬ್ಬಂದಿಯ ಕೊರತೆಯಿದೆ. ಅದಕ್ಕಾಗಿ ಹೆಚ್ಚು ಹಣವನ್ನು ಗ್ರಾಮ ಪಂಚಾಯಿತಿಗೆ ಕೊಡಬೇಕೆಂದು ನಾನು ಹೇಳುವುದಕ್ಕೆ ಇಚ್ಛೆ ಪಡುತ್ತೇನೆ. ಗ್ರಾಮ ಪಂಚಾಯಿತಿಯಲ್ಲಿ ಬೇಸಿಗೆ ಕಾಲದಲ್ಲಿ ಬಹುಶಃ ಕುಡಿಯುವ ನೀರಿನ ಸಮಸ್ಯೆ ಬಂದಾಗ ಕುಡಿಯುವ ನೀರನ್ನು ಟ್ಯಾಂಕರ್ ಮೂಲಕ ಕೊಡುವ

ವ್ಯವಸ್ಥೆ ಆಗುತ್ತಿದೆ. ಶಾಸಕರಾದ ನಾವು ಜಾಗೃತ ಸಭೆಗಳ ಅಧ್ಯಕ್ಷರಾಗಿ ಸಭೆಗಳನ್ನು ಮಾಡಿ, ಗ್ರಾಮ ಪಂಚಾಯಿತಿಗೆ ಬೇಸಿಗೆ ಕಾಲದಲ್ಲಿ ಟ್ಯಾಂಕರ್ ಮೂಲಕ ಕುಡಿಯುವ ನೀರು ಕೊಡಬೇಕೆನ್ನುವ ರೀತಿಯಲ್ಲಿ ತಹಶೀಲ್ದಾರರ ಮೂಲಕ ಹಾಗೂ ಇಲಾಖೆಯ ಮೂಲಕ ಹೇಳಿ ಟ್ಯಾಂಕರ್ ನೀರನ್ನು ಹಾಕುವ ವ್ಯವಸ್ಥೆ ಇದೆ. ಆದರೆ, ಕುಡಿಯುವ ನೀರಿನ ಕ್ರಿಯಾ ಯೋಜನೆ ಆಗುವಾಗ ಯಾವ ಪಂಚಾಯಿತಿಗೆ ಟ್ಯಾಂಕರ್ ಮೂಲಕ ನೀರು ಕೊಡಲಾಗುತ್ತದೆ ಆ ಗ್ರಾಮ ಪಂಚಾಯಿತಿಯ ಅನುದಾನದ ಲಿಸ್ಟ್ ಅನ್ನು ಕೊಟ್ಟಾಗ ಅಥವಾ ನಾವು ಜಾಗೃತ ಸಭೆಗಳನ್ನು ಮಾಡಿ, **PDO** ಗಳ ಸಮಸ್ಯೆಗಳನ್ನು ಅರ್ಥ ಮಾಡಿಕೊಂಡು ಲಿಸ್ಟ್ ಕಳುಹಿಸಿದರೆ ಯಾವುದೇ ಅನುದಾನ ಕುಡಿಯುವ ನೀರಿನ ಯೋಜನೆಗೆ ಅಲ್ಲಿ ಅನುಷ್ಠಾನವಾಗುತ್ತಿಲ್ಲ. ಅದರ ಬದಲಾಗಿ ಇಂಜಿನಿಯರ್ಸ್‌ಗಳು ಜಿಲ್ಲಾ ಪಂಚಾಯಿತಿ ಸದಸ್ಯರಿಗೆ ಹಂಚಿಕೆ ಮಾಡುತ್ತಾರೆ. ಅವರು ಎಲ್ಲಿ ಕಂಟ್ರ್ಯಾಕ್ಟರ್ ಲಾಬಿ ಇದೆ ಅಲ್ಲಿ ಹಾಕುತ್ತಾರೆ ವಿನಃ ನಿಜವಾಗಿ ಯಾವ ಪಂಚಾಯಿತಿಗೆ ಬೇಸಿಗೆಯಲ್ಲಿ ನೀರಿಲ್ಲ ಆ ಪಂಚಾಯಿತಿಗೆ ಅನುದಾನ ಅನುಷ್ಠಾನವಾಗುತ್ತಿಲ್ಲ. ಆದ್ದರಿಂದ ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರು ಕುಡಿಯುವ ನೀರಿನ ಯೋಜನೆ ಮಾಡತಕ್ಕಂಥ ಸಂದರ್ಭದಲ್ಲಿ ಜಾಗೃತ ಸಮಿತಿ ಏನು ಶಿಫಾರಸ್ಸು ಮಾಡಿರುತ್ತದೆ ಹಾಗೂ ಬೇಸಿಗೆಯಲ್ಲಿ ಯಾವ ಪಂಚಾಯಿತಿಗೆ ಟ್ಯಾಂಕರ್ ಮೂಲಕ ನೀರು ಕೊಡುತ್ತಿದ್ದೇವೆ ಆ ಪಂಚಾಯಿತಿಗೆ ಮೊದಲು ಆದ್ಯತೆಯನ್ನು ಕೊಡಬೇಕು. ಜಿಲ್ಲಾ ಪಂಚಾಯಿತಿಗಳಿಗೆ ಹಂಚಿಕೆ ಮಾಡಿಕೊಂಡು ಹೋದರೆ ಮರು ವರ್ಷ ಪುನಃ ಅದೇ ಪಂಚಾಯಿತಿಗೆ ಟ್ಯಾಂಕರ್ ಮೂಲಕ ನೀರು ಕೊಡುವ ವ್ಯವಸ್ಥೆ ಆಗುತ್ತದೆ. ಇದರ ಬಗ್ಗೆ ಸರ್ಕಾರ ಒಂದು ನಿರ್ದಿಷ್ಟವಾದ ನಿಲುವನ್ನು ತೆಗೆದುಕೊಳ್ಳುವುದರ ಮೂಲಕ ಕುಡಿಯುವ ನೀರಿಗೆ ಹೆಚ್ಚಿನ ಒತ್ತನ್ನು ಕೊಡಬೇಕೆಂದು ನಾನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಬಹು ಗ್ರಾಮ ಕುಡಿಯುವ ನೀರಿನ ಯೋಜನೆ ಬಗ್ಗೆ ಹೇಳುವುದಾದರೆ, ನಮ್ಮ ಜಿಲ್ಲೆಯಲ್ಲಿ ಮಳೆಗಾಲದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಮಳೆ ಬರುತ್ತದೆ. ಆದರೆ, ಬೇಸಿಗೆ ಕಾಲದಲ್ಲಿ ಕುಡಿಯುವ ನೀರಿನ ಹಾಹಾಕಾರವಿರುತ್ತದೆ ಹಾಗೂ ಟ್ಯಾಂಕರ್ ಮೂಲಕ ನೀರನ್ನು ಕೊಡತಕ್ಕಂಥ

ಕೆಲಸ ಆಗುತ್ತದೆ. ಪಶ್ಚಿಮವಾಹಿನಿ ಹೊಸ ಯೋಜನೆಯನ್ನು Major Irrigation ನಲ್ಲಿ ಡ್ಯಾಮ್‍ಗಳಿಗೆ ಈಗಾಗಲೇ ಪ್ರಸ್ತಾವನೆಯನ್ನು ಕೊಟ್ಟಿದ್ದೇವೆ. ಬಹು ಗ್ರಾಮ ಕುಡಿಯುವ ನೀರಿನ ಯೋಜನೆ ಏನಿದೆ ಆ ಯೋಜನೆಯಿಂದ ನಮ್ಮ ಮಲೆನಾಡು ಭಾಗಕ್ಕೆ ಹೆಚ್ಚು ಒತ್ತನ್ನು ಕೊಡುವ ದೃಷ್ಟಿಯಿಂದ ಆ ಡ್ಯಾಮ್ ಏನಾಗಿದೆ ಆ ಕುಡಿಯುವ ನೀರಿನ ಯೋಜನೆಯ ಅನುಷ್ಠಾನ ಮಂದಗತಿಯಲ್ಲಿ ಆಗುತ್ತಿದೆ. ಬಹು ಕುಡಿಯುವ ನೀರಿನ ಯೋಜನೆ ಬಹಳ ಮಂದಗತಿಯಲ್ಲಿ ಆಗುತ್ತಿದೆ. ಆದ್ದರಿಂದ, ಈ ಯೋಜನೆಗೆ ಆಂದೋಲನದ ರೀತಿಯಲ್ಲಿ ಹೆಚ್ಚು ಒತ್ತನ್ನು ಕೊಟ್ಟು ಕುಡಿಯುವ ನೀರಿನ ಯೋಜನೆಯ ಅನುಷ್ಠಾನ ಮಾಡಬೇಕೆಂದು ನಾನು ಹೇಳುತ್ತೇನೆ. ಕಾರ್ಯದರ್ಶಿಗಳು ಹಾಗೂ PDO ಗಳ ಕೊರತೆ ಎಲ್ಲಾ ಕಡೆ ಇದೆ. ಅದಕ್ಕೆ ಅನುದಾನದ ಕೊರತೆ ಇದ್ದ ಸಂದರ್ಭದಲ್ಲಿ ಕಾರ್ಯದರ್ಶಿಗಳು ಹಾಗೂ PDO ಗಳ ನೇಮಕಾತಿ ಆಗಬೇಕಾಗಿದೆ. ಕೆಲವು PDOಗಳು ಪಂಚಾಯಿತಿಗಳಿಗೆ ಹೋಗುವುದಕ್ಕೆ ತಯಾರಿಲ್ಲ. ಸಕಾಲದಲ್ಲಿ ಅರ್ಜಿ ಹಾಕಿ ಕೆಲವು Retired NGOs ಗಳಿದ್ದಾರೆ. ಅವರು ನಿವೃತ್ತಿ ಆದಮೇಲೆ ಸಕಾಲದಲ್ಲಿ ಪಂಚಾಯಿತಿಗೆ ಅರ್ಜಿ ಹಾಕುವಂಥದ್ದು, ಒಂದು ಅರ್ಜಿ ಅಲ್ಲ, ಹಲವಾರು ಅರ್ಜಿಗಳನ್ನು ಹಾಕುತ್ತಾರೆ. ಅವರ ಉದ್ಯೋಗನೇ ಅದು. ಒಬ್ಬ PDO ` 25,000 ಹಣ ದಂಡ ತುಂಬಿದ್ದಾರೆ. ಅವರು ಆತ್ಮಹತ್ಯೆ ಮಾಡಿಕೊಳ್ಳುವುದಕ್ಕೆ ಪ್ರಯತ್ನಿಸಿದ್ದರು. ಆಗ ನಾವು ಅವರನ್ನು ಕೂರಿಸಿ, ಅವರ ಜೊತೆ ಮಾತನಾಡಿ ತಮ್ಮ ಮೂಲಕ ಅವರನ್ನು ವರ್ಗಾವಣೆ ಮಾಡಿ ಬೇರೆ ಕಡೆ ಹಾಕಿದ್ದೇವೆ. ಮತ್ತೆ 3 PDO ಗಳ ವರ್ಗಾವಣೆ ಮಾಡಿ ಅಂದರೆ ಅವರು ಕೆಲಸ ಮಾಡದೆ 3 ದಿನ ರಜೆ ಹಾಕಿ ಹೋಗಿದ್ದಾರೆ. 4 ಪಂಚಾಯಿತಿ PDO ಗಳನ್ನು ಹಾಕಿದರೆ ಅವರು ಅಲ್ಲಿ ಕೆಲಸ PDOಗಳು ಮಾಡುವುದಕ್ಕೆ ತಯಾರಿಲ್ಲ. ಆದ್ದರಿಂದ ಈ ಸಕಾಲದಲ್ಲಿ ಕೆಲವು ದುರುಪಯೋಗವಾಗುವುದನ್ನು ತಾವು ತಿದ್ದುಪಡಿ ಮಾಡಿ, PDO ಗಳು ಕೆಲಸ ಮಾಡುವ ಹಾಗೆ ಅವರಲ್ಲಿ ಆತ್ಮಸ್ಥೈರ್ಯವನ್ನು ತುಂಬತಕ್ಕಂಥ ಕೆಲಸವನ್ನು ಮಾಡಬೇಕು. ಇಲ್ಲವಾದರೆ ಈ ಸಕಾಲದಲ್ಲಿ PDO ಗಳು ಕೆಲಸ ಮಾಡುವುದಕ್ಕೆ ತಯಾರಿಲ್ಲ. ಕೆಲವು ಪಂಚಾಯಿತಿ PDO ಗಳು ರಜೆ ಹಾಕಿ ಮನೆಯಲ್ಲಿ

ಕುಳಿತುಕೊಳ್ಳುವುದನ್ನು ತಡೆಯಬೇಕಾದರೆ ತಾವು ಇದರ ಬಗ್ಗೆ ಹೆಚ್ಚಿನ ಒತ್ತನ್ನು ಕೊಡಬೇಕೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ತಾಲ್ಲೂಕು ಪಂಚಾಯಿತಿಯಲ್ಲಿರುವ ಸಿಬ್ಬಂದಿ ಕೊರತೆ ಬಗ್ಗೆ ಬಹಳಷ್ಟು ಶಾಸಕರು ಮಾತನಾಡಿದ್ದಾರೆ. ತಾವು ತಾಲ್ಲೂಕು ಪಂಚಾಯಿತಿಯಲ್ಲಿ ಸಿಬ್ಬಂದಿಯನ್ನು ನೇಮಕ ಮಾಡಲೇಬೇಕಾದ ಅನಿವಾರ್ಯ ಪರಿಸ್ಥಿತಿ ಇವತ್ತು ಉದ್ಭವವಾಗಿದೆ. ತಾಲ್ಲೂಕು ಪಂಚಾಯಿತಿಗೆ ಸಿಬಂದಿಗಳನ್ನು ನೇಮಕ ಮಾಡುವ ಮೂಲಕ ತಾಲ್ಲೂಕು ಪಂಚಾಯಿತಿಗೆ ಅನುದಾನವನ್ನು ಹೆಚ್ಚು ಮಾಡತಕ್ಕಂಥ ಕೆಲಸವನ್ನು ತಾವು ಮಾಡಬೇಕು. ಇವತ್ತಿನ ದಿವಸ ಮೆಸ್ಕಾಂನಲ್ಲಿ ಬಿಲ್ ಕಟ್ಟುವುದಕ್ಕೆ ಆಗದೆ ಗ್ರಾಮ ಪಂಚಾಯಿತಿಯಲ್ಲಿ ಅನೇಕ ಯೋಜನೆಗಳು ನೆನೆಗುದಿಗೆ ಬಿದ್ದಿವೆ. ನೀರು ಪೂರೈಕೆ ಪಂಪ್‌ಸೆಟ್ ಬೀದಿ ದೀಪ ಇರುಬಹುದು, ಇವತ್ತಿನ ದಿವಸ ಸೋಲಾರ್ ಶಕ್ತಿಯನ್ನು ಬಳಸಿಕೊಳ್ಳಲು ಸಾಧ್ಯವಾಗುವಂತೆ ವಿಶೇಷ ಅನುದಾನವನ್ನು ಪಂಚಾಯಿತಿಗೆ ನೀಡಬೇಕು. ಸೋಲಾರ್ ದಾರಿದೀಪ ಅಳವಡಿಸಿದ್ದಲ್ಲಿ ಸೋಲಾರ್ ಪ್ಯಾನಲ್ ಮತ್ತು ಬ್ಯಾಟರಿ ಲೀಕ್ ಆಗುವುದನ್ನು ತಪ್ಪಿಸಲು ಕೇಂದ್ರೀಕೃತ ಮಾದರಿಯ ಬೀದಿ ದೀಪಗಳ ವ್ಯವಸ್ಥೆಯನ್ನು ಅಳವಡಿಸಲು ತಾಂತ್ರಿಕ ನೆರವು ನೀಡಬೇಕೆಂದು ನಾನು ಒತ್ತಾಯವನ್ನು ಮಾಡುತ್ತೇನೆ. ಮಾನ್ಯ ಉಪಾಧ್ಯಕ್ಷರೆ, ನನ್ನ ಕ್ಷೇತ್ರದ 'ಮರವಂತೆ' ಗ್ರಾಮ ಪಂಚಾಯಿತಿಯಲ್ಲಿ Philips India ಸಂಸ್ಥೆಯ ನೆರವಿನೊಂದಿಗೆ ಬೀದಿ ದೀಪ ವ್ಯವಸ್ಥೆ ಅನುಷ್ಠಾನವಾಗಿದೆ. ಇದನ್ನೇ ಇಡೀ ಗ್ರಾಮ ಪಂಚಾಯಿತಿ ವ್ಯವಸ್ಥೆಗಳಿಗೆ ಮಾಡಿದಂಥ ಸಂದರ್ಭದಲ್ಲಿ ಪಂಚಾಯಿತಿಗೆ ಹೆಚ್ಚು ಒತ್ತನ್ನು ಕೊಟ್ಟಂತಾಗುತ್ತದೆ ಮತ್ತು ಪಂಚಾಯಿತಿಯ ಆದಾಯ ಹೆಚ್ಚಾಗಬೇಕಾದರೆ ಅದರ ಆಸ್ತಿಯನ್ನು ಅಭಿವೃದ್ಧಿ ಮಾಡುವುದಕ್ಕೆ ತಾವು ವಿಶೇಷವಾದ ನೀತಿಯನ್ನು ರೂಪಿಸಬೇಕಾಗುತ್ತದೆ. ನನ್ನ ಕ್ಷೇತ್ರದ ಯಡ್ತರೆ ಪಂಚಾಯತ್ ಸಿಟಿಯಲ್ಲಿರುವಂಥ ಗ್ರಾಮ ಪಂಚಾಯಿತಿಯನ್ನು ಅಭಿವೃದ್ಧಿ ಮಾಡಬೇಕಾದರೆ ಅದರದ್ದೇ ಜಾಗ, ಆಸ್ತಿ ಇತ್ತು. ಅದನ್ನು ಅಭಿವೃದ್ಧಿ ಮಾಡಬೇಕಾದರೆ ಹಲವಾರು ವರ್ಷಗಳಿಂದ ಬೇಡಿಕೆ ಇಟ್ಟಿದ್ದರಿಂದ ಈಗ ಅನುಮತಿ ಸಿಕ್ಕಿದ್ದು ಕಟ್ಟಡ ಟೆಂಡರ್ ಆಗಿ ಕಟ್ಟಲಾಗಿ ಇವತ್ತು ಪಂಚಾಯಿತಿಯ ಆಸ್ತಿಯಾಗಿದೆ.

ಪಂಚಾಯಿತಿಗೆ ಬಾಡಿಗೆ ಬರುತ್ತದೆ. ಈ ರೀತಿ ತಾವು ಯೋಜನೆಗಳನ್ನು ರೂಪಿಸಬೇಕೆಂದು ಹೇಳಬಯಸುತ್ತೇನೆ.

ಉಪಾಧ್ಯಕ್ಷರು:– ಬೇಗ ಮುಗಿಸಿ.

ಶ್ರೀ ಕೆ. ಗೋಪಾಲ ಪೂಜಾರಿ:– ಏನು ಸರ್, ನಾನು 4 ಬಾರಿ ಶಾಸಕನಾಗಿದ್ದೇನೆ. 5 ನಿಮಿಷ ಅಂದರೆ ಒಬ್ಬ senior MLA ಇಡೀ ಜಿಲ್ಲೆಯ ಪ್ರತಿನಿಧಿಯಾಗಿ ಮಾತನಾಡುವುದಕ್ಕೆ ಅವಕಾಶ ಕೊಡಿ.

ಉಪಾಧ್ಯಕ್ಷರು:– ಬೇಗ conclude ಮಾಡಿ.

ಶ್ರೀ ಕೆ. ಗೋಪಾಲ ಪೂಜಾರಿ:– ಮಾನ್ಯ ಉಪಾಧ್ಯಕ್ಷರೆ, ಪಂಚಾಯಿತಿಯ ಒಂದು ಕೃಷಿಯೇತರ ಜಮೀನು 100 ಚದರ ಮೀಟರಿಗೆ 1 ರೂಪಾಯಿ ಶುಲ್ಕ ಚಾರ್ಜ್ ಮಾಡುವುದಕ್ಕೆ ಅವಕಾಶ ಕೊಟ್ಟಿದ್ದೀರಿ. ಒಂದು ರಸೀದಿಗೆ ಜೆರಾಕ್ಸ್ ಹಾಕುವುದಕ್ಕೆ 1 ರೂಪಾಯಿ ತೆಗೆದುಕೊಳ್ಳುತ್ತಾರೆ. ಆದ್ದರಿಂದ, ತಾವು ಇದನ್ನು ಬದಲಾವಣೆ ಮಾಡಬೇಕು. At least ಅದನ್ನು ಒಂದು ಚದರಕ್ಕೆ 1 ರೂಪಾಯಿ ಚಾರ್ಜ್ ಮಾಡುವುದಕ್ಕಾದರೂ ಅವಕಾಶ ಕಲ್ಪಿಸಿಕೊಡಬೇಕು. ಆಗ ಪಂಚಾಯಿತಿಯ ಆದಾಯ ಜಾಸ್ತಿಯಾಗುತ್ತದೆ. ಅದಕ್ಕೆ ತಾವು ಬದಲಾವಣೆಯನ್ನು ತರಬೇಕೆನ್ನುವ ಮಾತನ್ನು ಹೇಳಬಯಸುತ್ತೇನೆ.

ಫಾರಂ ನಂ.9 ಮತ್ತು 11 ವಿಚಾರವಾಗಿ ತಮ್ಮ ಕಾಲದಲ್ಲಿ ನ್ಯಾಯ ದೊರಕಿ ಸ್ವಲ್ಪ ಮಟ್ಟಿಗೆ ಸಮಸ್ಯೆಯಾಗಿತ್ತು. ತಾವು ನಮಗೆ ನ್ಯಾಯವನ್ನು ಒದಗಿಸಿ ಕೊಟ್ಟಿದ್ದೀರಿ. ಆದರೆ, ಇವತ್ತು ದಿ:14.06.2013ರಂತೆ ಪಂಚಾಯಿತಿಗೆ ಅನುಮತಿ ಕೊಟ್ಟು ಜವಾಬ್ದಾರಿ ಕೊಟ್ಟಿದ್ದೀರಿ. ಅಲ್ಲಿ ಇಂಜಿನಿಯರ್‌ಗಳ ಕೊರತೆಯಿದೆ. ಇಂಜಿನಿಯರ್ ಕೊರತೆಯಿರುವುದರಿಂದ ಪಂಚಾಯಿತಿಯಲ್ಲಿ ಈ ಕೆಲಸವನ್ನು ಮಾಡುವುದಕ್ಕೆ ಸಾಧ್ಯವಾಗುತ್ತದೆಯೇ? ಅದಲ್ಲದೆ, ಗ್ರಾಮೀಣ ಪ್ರದೇಶದಲ್ಲಿ ಫಾರಂ ನಂ.9 ಮತ್ತು 11ಕ್ಕೆ ನಗರ ವ್ಯಾಪ್ತಿಯ permission ಬೇಕಾಗಿಲ್ಲವೆಂದು ತಾವು ಆದೇಶ ಕೊಟ್ಟಿದ್ದೀರಿ. ಆದರೆ, ಅದು G.O. ಆಗಿ ಜಿಲ್ಲಾಧಿಕಾರಿಗಳಿಗೆ ತಲುಪಿಲ್ಲ. ಜಿಲ್ಲಾಧಿಕಾರಿಗಳಿಗೆ ತಾವು G.O. ಮಾಡಿ ಫಾರಂ 9 ಮತ್ತು 11ನ್ನು ಪಂಚಾಯಿತಿ ವ್ಯವಸ್ಥೆಯೊಳಗೆ ಮಾಡಿಕೊಳ್ಳುವಂಥ

ಅವಕಾಶವನ್ನು ತಾವು ಕೊಟ್ಟರೆ ಉತ್ತಮವಾಗುತ್ತದೆ. ಇವತ್ತು ಈ ಫಾರಂ 9 ಮತ್ತು 11 ಸಮಸ್ಯೆಯಿಂದ ಕಂದಾಯ ಇಲಾಖೆಯ ಆದಾಯ ಕಡಿಮೆಯಾಗಿದೆ. ಕಂದಾಯ ಇಲಾಖೆಯ ಆದಾಯ ಹೆಚ್ಚಿಸಬೇಕಾದರೆ ತಾವು ತಕ್ಷಣವೇ G.O. ಮಾಡಿಕೊಡಬೇಕೆನ್ನುವ ಮಾತನ್ನು ಹೇಳುವುದಕ್ಕೆ ಇಚ್ಛೆ ಪಡುತ್ತೇನೆ.

ಇನ್ನು ಉದ್ಯೋಗ ಖಾತರಿ ಬಗ್ಗೆ ಎರಡು ಮಾತುಗಳನ್ನಾಡುತ್ತೇನೆ. ಬಹಳಷ್ಟು ಜನ ಉದ್ಯೋಗ ಖಾತರಿ ಯೋಜನೆ ಬಗ್ಗೆ ಮಾತನಾಡಿದರು. ನಮ್ಮ ಜಿಲ್ಲೆಯೊಳಗೆ ಕೇವಲ 119 ಕುಟುಂಬ ಮಾತ್ರ 100 ದಿನ ಕೆಲಸ ಮಾಡಲು ಅವಕಾಶವಾಗಿದೆ. ಇಡೀ ರಾಜ್ಯದಲ್ಲಿ ಬೆಂಗಳೂರು ಬಿಟ್ಟರೆ ಉಡುಪಿ ಜಿಲ್ಲೆ ಕೇವಲ 119 ಕುಟುಂಬ. ಜಿಲ್ಲಾವಾರು ಬಂದಾಗ ಉದ್ಯೋಗ ಖಾತರಿ ಯೋಜನೆಯಡಿ ಉಡುಪಿ ಜಿಲ್ಲೆ ಏತಕ್ಕಾಗಿ ಅತ್ಯಂತ ಕೊನೆಯ ಸ್ಥಾನಕ್ಕೆ ಹೋಗಿದೆ ಎನ್ನುವುದನ್ನು ಬಹುಶಃ ತಾವು ಚರ್ಚೆ ಮಾಡಬೇಕಾಗುತ್ತದೆ. ಇದಕ್ಕಾಗಿ awareness ಮೂಡಿಸಿ ಉದ್ಯೋಗ ಖಾತರಿ ಯೋಜನೆಯಿಂದ ನಮ್ಮ ಜಿಲ್ಲೆಗೆ ಹೆಚ್ಚು ಲಾಭವಾಗುವ ರೀತಿಯಲ್ಲಿ ತಾವು ಅವಕಾಶವನ್ನು ಕಲ್ಪಿಸಿಕೊಡಬೇಕೆನ್ನುವ ಮಾತನ್ನು ಹೇಳಿ ನನಗೆ ಅವಕಾಶ ಕೊಟ್ಟದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರು:- ಈಗ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯ ಬೇಡಿಕೆಗಳ ಮೇಲೆ ಚರ್ಚೆ ಮುಗಿದಿದೆ. ಸಂಬಂಧಪಟ್ಟ ಸಚಿವರು ಉತ್ತರ ನೀಡಲಿದ್ದಾರೆ.